**JP-1-07**

This booklet contains 20 pages.
इस पुस्तिका में 20 पृष्ठ हैं ।

**PAPER I / प्रश्न-पत्र I**
**Kannada Language Supplement**
**कन्नड़ भाषा परिशिष्ट**
**PART IV & V / भाग IV & V**

**Test Booklet Code**
**परीक्षा पुस्तिका संकेत**
**A**

**Test Booklet No.**
**परीक्षा पुस्तिका संख्या**
318965

**Do not open this Test Booklet until you are asked to do so.**
**इस परीक्षा पुस्तिका को तब तक न खोलें जब तक कहा न जाए ।**
**Read carefully the Instructions on the Back Cover (Page 19 & 20) of this Test Booklet.**
**इस परीक्षा पुस्तिका के पिछले आवरण (पृष्ठ 19 व 20) पर दिए निर्देशों को ध्यान से पढ़ें ।**

**For instructions in Kannada see Page 2 of this Booklet. / कन्नड़ में निर्देशों के लिए इस पुस्तिका का पृष्ठ 2 देखें ।**

## *INSTRUCTIONS FOR CANDIDATES*

1. This booklet is a supplement to the Main Test Booklet for those candidates who wish to answer **EITHER** Part IV (Language I) **OR** Part V (Language II) in **KANNADA** language, but **NOT BOTH**.
2. Candidates are required to answer Parts I, II, III from the Main Test Booklet and Parts IV and V from the languages chosen by them.
3. Questions on English and Hindi languages for Part IV and Part V have been given in the Main Test Booklet. Language Supplements can be asked for separately.
4. Use **Blue / Black Ball Point Pen only** for writing particulars on this page / marking responses in the Answer Sheet.
5. The CODE for this Language Booklet is **A**. Make sure that the CODE printed on **Side-2** of the Answer Sheet and on your Main Test Booklet is the same as that on this Language Supplement Booklet. In case of discrepancy, the candidate should immediately report the matter to the Invigilator for replacement of the Language Supplement Test Booklet.
6. This Test Booklet has **two** Parts, IV and V, consisting of **60** Objective Type Questions, each carrying 1 mark :
   Part-IV : Language I - (Kannada) (Q. 91 to Q. 120)
   Part-V : Language II - (Kannada) (Q. 121 to Q. 150)
7. Part-IV contains 30 questions for Language-I and Part-V contains 30 questions for Language-II. In this Test Booklet, only questions pertaining to Kannada language have been given. **In case the language/s you have opted for as Language-I and/or Language-II is a language other than Kannada, please ask for a Test Booklet that contains questions on that language. The languages being answered must tally with the languages opted for in your Application Form.**
8. **Candidates are required to attempt questions in Part -V (Language-II) in a language other than the one chosen as Language-I (in Part-IV) from the list of languages.**
9. Rough work should be done only in the space provided in the Test Booklet for the same.
10. The answers are to be recorded on the OMR Answer Sheet only. Mark your responses carefully. No whitener is allowed for changing answers.

## *परीक्षार्थियों के लिए निर्देश*

1. यह पुस्तिका मुख्य परीक्षा पुस्तिका की एक परिशिष्ट है, उन परीक्षार्थियों के लिए जो **या** तो भाग IV (भाषा I) **या** भाग V (भाषा II) **कन्नड़** भाषा में देना चाहते हैं, लेकिन **दोनों नहीं** ।
2. परीक्षार्थी भाग I, II, III के उत्तर मुख्य परीक्षा पुस्तिका से दें और भाग IV व V के उत्तर उनके द्वारा चुनी भाषाओं से ।
3. अंग्रेज़ी व हिन्दी भाषा पर प्रश्न मुख्य परीक्षा पुस्तिका में भाग IV व भाग V के अन्तर्गत दिए गए हैं । भाषा परिशिष्टों को आप अलग से माँग सकते हैं ।
4. इस पृष्ठ पर विवरण अंकित करने एवं उत्तर पत्र पर निशान लगाने के लिए **केवल नीले/काले बॉल पॉइंट पेन** का प्रयोग करें ।
5. इस भाषा पुस्तिका का **संकेत है A** । यह सुनिश्चित कर लें कि इस भाषा परिशिष्ट पुस्तिका का संकेत, उत्तर पत्र के **पृष्ठ-2** एवं मुख्य परीक्षा पुस्तिका पर छपे संकेत से मिलता है । अगर यह भिन्न हो तो परीक्षार्थी दूसरी भाषा परिशिष्ट परीक्षा पुस्तिका लेने के लिए निरीक्षक को तुरन्त अवगत कराएँ ।
6. इस परीक्षा पुस्तिका में **दो** भाग IV और V हैं, जिनमें **60** वस्तुनिष्ठ प्रश्न हैं, जो प्रत्येक 1 अंक का है :
   भाग-IV : भाषा I - (कन्नड़) (प्र. 91 से प्र. 120)
   भाग-V : भाषा II - (कन्नड़) (प्र. 121 से प्र. 150)
7. भाग-IV में भाषा-I के लिए 30 प्रश्न और भाग-V में भाषा-II के लिए 30 प्रश्न दिए गए हैं । इस परीक्षा पुस्तिका में केवल कन्नड़ भाषा से संबंधित प्रश्न दिए गए हैं । **यदि भाषा-I और/या भाषा-II में आपके द्वारा चुनी गई भाषा(एँ) कन्नड़ के अलावा है तो कृपया उस भाषा वाली परीक्षा पुस्तिका माँग लीजिए । जिन भाषाओं के प्रश्नों के उत्तर आप दे रहे हैं वह आवेदन पत्र में चुनी गई भाषाओं से अवश्य मेल खानी चाहिए ।**
8. **परीक्षार्थी भाग-V (भाषा-II) के लिए, भाषा सूची से ऐसी भाषा चुनें जो उनके द्वारा भाषा I (भाग-IV) में चुनी गई भाषा से भिन्न हो ।**
9. रफ कार्य परीक्षा पुस्तिका में इस प्रयोजन के लिए दी गई खाली जगह पर ही करें ।
10. सभी उत्तर केवल OMR उत्तर पत्र पर ही अंकित करें । अपने उत्तर ध्यानपूर्वक अंकित करें । उत्तर बदलने हेतु श्वेत रंजक का प्रयोग निषिद्ध है ।

SEAL

Name of the Candidate (in Capitals) : ____________________
परीक्षार्थी का नाम (बड़े अक्षरों में) :
Roll Number : in figures ____________________
अनुक्रमांक : (अंकों में)
: in words ____________________
: (शब्दों में)
Centre of Examination (in Capitals) : ____________________
परीक्षा केन्द्र (बड़े अक्षरों में) :
Candidate's Signature : ____________ Invigilator's Signature : ____________
परीक्षार्थी के हस्ताक्षर : निरीक्षक के हस्ताक्षर :
Facsimile signature stamp of
Centre Superintendent ____________________

ಈ ಪ್ರಶ್ನೆ ಪುಸ್ತಿಕೆ 20 ಪುಟಗಳನ್ನು ಹೊಂದಿರುತ್ತದೆ.

# JP-1-07

## ಪ್ರಶ್ನೆ ಪತ್ರಿಕೆ I
## ಕನ್ನಡ ಭಾಷಾ ಪೂರಕ
## ಭಾಗ IV & V

ಪ್ರಶ್ನೆ ಪುಸ್ತಿಕೆ ಸಂಕೇತ

**A**

**ಈ ಪ್ರಶ್ನೆ ಪುಸ್ತಿಕೆಯನ್ನು ತೆರೆಯುವಂತೆ ಹೇಳುವವರೆಗೆ ಯಾರೂ ತೆರೆಯಬಾರದು.**

**ಈ ಪ್ರಶ್ನೆ ಪುಸ್ತಿಕೆಯ ಹಿಂದಿನ ಪುಟದಲ್ಲಿ ಕೊಟ್ಟಿರುವ ಸೂಚನೆಗಳನ್ನು (ಪುಟ 19 & 20) ಗಮನವಿಟ್ಟು ಓದಿರಿ.**

**ಪರೀಕ್ಷಾರ್ಥಿಗಳಿಗೆ ಸೂಚನೆಗಳು:**

1. ಈ ಪ್ರಶ್ನೆ ಪತ್ರಿಕೆಯು ಮುಖ್ಯ ಪ್ರಶ್ನೆ ಪುಸ್ತಿಕೆಯ ಪೂರಕ ಪತ್ರಿಕೆಯಾಗಿದ್ದು, ಇದು ಭಾಗ IV (ಭಾಷೆ I) ಅಥವಾ ಭಾಗ V(ಭಾಷೆ II) ನ್ನು ಕನ್ನಡ ಭಾಷೆಯಲ್ಲಿ ಉತ್ತರಿಸಲು ಆಯ್ದುಕೊಂಡ ಅಭ್ಯರ್ಥಿಗಳಿಗೆ ಅನ್ವಯವಾಗುತ್ತದೆ. ಅಭ್ಯರ್ಥಿಗಳು ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದು ಎರಡನ್ನೂ ಅಲ್ಲ.
2. ಅಭ್ಯರ್ಥಿಗಳು ಮುಖ್ಯ ಪ್ರಶ್ನೆ ಪುಸ್ತಿಕೆಯ ಭಾಗ I, II, III ನ್ನು ಅವಶ್ಯಕವಾಗಿ ಉತ್ತರಿಸಬೇಕು ಮತ್ತು ಪೂರಕ ಪ್ರಶ್ನೆ ಪುಸ್ತಿಕೆಯಿಂದ ಭಾಗ IV ಮತ್ತು V ರ ಉತ್ತರವನ್ನು ತಾವು ಆಯ್ದುಕೊಂಡ ಭಾಷೆಯಲ್ಲಿ ಉತ್ತರಿಸಬೇಕು.
3. ಭಾಗ IV ಭಾಗ V ರ ಇಂಗ್ಲಿಷ್ ಮತ್ತು ಹಿಂದಿ ಭಾಷೆಯ ಪ್ರಶ್ನೆಗಳನ್ನು ಮುಖ್ಯ ಪ್ರಶ್ನೆ ಪುಸ್ತಿಕೆಯಲ್ಲೇ ಕೊಡಲಾಗಿದೆ. ಇತರ ಪೂರಕ ಭಾಷೆಯ ಪುಸ್ತಿಕೆಯನ್ನು ಬೇರೆ ಯಾಗಿ ಕೇಳಿ ಪಡೆಯಬಹುದು.
4. ಈ ಪುಟದಲ್ಲಿ ವಿವರ ಬರೆಯಲು ಮತ್ತು ಉತ್ತರ ಪತ್ರಿಕೆಯಲ್ಲಿ ಗುರುತು ಮಾಡಲು ಕೇವಲ ನೀಲಿ/ಕಪ್ಪು ಬಾಲ್ ಪಾಯಿಂಟ್ ಪೆನ್ ಉಪಯೋಗಿಸಿ.
5. ಈ ಭಾಷಾ ಪುಸ್ತಿಕೆಯ ಸಂಕೇತ **A** ಆಗಿದೆ. ಉತ್ತರ ಪತ್ರಿಕೆಯ ಪುಟ-2 ರಲ್ಲಿ ಮುದ್ರಣವಾಗಿರುವ ಸಂಕೇತದೊಡನೆ ಹೊಂದುತ್ತದೆಯೇ ಎಂದು ಸುನಿಶ್ಚಿತಗೊಳಿಸಿಕೊಳ್ಳಿರಿ. ಜೊತೆಗೆ ಪ್ರಶ್ನೆ ಪತ್ರಿಕೆಯ ಸಂಖ್ಯೆ ಮತ್ತು ಉತ್ತರ ಪತ್ರಿಕೆಯ ಸಂಖ್ಯೆ ಸರಿಹೊಂದುವುದನ್ನೂ ಸುನಿಶ್ಚಿತಗೊಳಿಸಿಕೊಳ್ಳಿ, ಒಂದು ವೇಳೆ ಇವೆರಡೂ ಬೇರೆ ಯಾಗಿದ್ದರೆ, ಪರೀಕ್ಷಾರ್ಥಿ ಬೇರೆ ಪ್ರಶ್ನೆ ಪತ್ರಿಕೆ ಹಾಗೂ ಉತ್ತರ ಪತ್ರಿಕೆ ಕೊಡುವಂತೆ ನಿರೀಕ್ಷಕರಿಗೆ ತಕ್ಷಣ ಮನವಿ ಮಾಡಿರಿ.
6. ಈ ಪ್ರಶ್ನೆ ಪತ್ರಿಕೆಯಲ್ಲಿ ಎರಡು ಭಾಗಗಳಿವೆ IV ಮತ್ತು V, ಇದರಲ್ಲಿ **60** ವಸ್ತುನಿಷ್ಠ ಪ್ರಶ್ನೆಗಳಿವೆ, ಅವುಗಳಿಗೆ ಪ್ರತಿಯೊಂದಕ್ಕೂ 1 ಅಂಕ :
   ಭಾಗ IV : ಭಾಷಾ I – (ಕನ್ನಡ) (ಪ್ರಶ್ನೆ 91 ರಿಂದ 120)
   ಭಾಗ V : ಭಾಷಾ II – (ಕನ್ನಡ) (ಪ್ರಶ್ನೆ 121 ರಿಂದ 150)
7. ಭಾಗ IV ರಲ್ಲಿ ಭಾಷೆ I ಕ್ಕಾಗಿ 30 ಪ್ರಶ್ನೆಗಳು ಮತ್ತು ಭಾಗ V ರಲ್ಲಿ ಭಾಷೆ II ಕ್ಕಾಗಿ 30 ಪ್ರಶ್ನೆಗಳನ್ನು ಕೊಡಲಾಗಿದೆ. ಈ ಪ್ರಶ್ನೆ ಪತ್ರಿಕೆಯಲ್ಲಿ ಕೇವಲ ಕನ್ನಡ ಭಾಷೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೊಡಲಾಗಿದೆ. ಒಂದು ವೇಳೆ ಭಾಷೆ I ಮತ್ತು/ಅಥವಾ II ರಲ್ಲಿ ನೀವು ಆಯ್ಕೆ ಮಾಡಿದ ಭಾಷೆಗಳು - ಕನ್ನಡ ಅಲ್ಲದೆ ಬೇರೆ ಇದ್ದರೆ, ದಯವಿಟ್ಟು ಆ ಭಾಷೆಯ ಪ್ರಶ್ನೆ ಪತ್ರಿಕೆ ಕೊಡುವಂತೆ ಮನವಿ ಮಾಡಿ. ನಿಮ್ಮ ಮನವಿ ಪತ್ರದಲ್ಲಿ ಆಯ್ಕೆ ಮಾಡಿದ ಭಾಷೆ ಹಾಗೂ ನೀವು ಉತ್ತರ ಬರೆಯುವ ಭಾಷೆ ಹೊಂದಿಕೆಯಾಗಬೇಕು.
8. ಪರೀಕ್ಷಾರ್ಥಿ ಭಾಗ V (ಭಾಷೆ II) ಕ್ಕಾಗಿ, ಭಾಷೆ I (ಭಾಗ IV) ರಲ್ಲಿ ಆರಿಸಿಕೊಂಡ ಭಾಷೆಯಲ್ಲದೇ ಕೊಟ್ಟಿರುವ ಪಟ್ಟಿಯಲ್ಲಿ ಬೇರೆ ಭಾಷೆಯನ್ನು ಆರಿಸಿಕೊಳ್ಳಬೇಕು.
9. ಕಚ್ಚಾ ಕೆಲಸ/ಬರವಣಿಗೆಯನ್ನು ಪ್ರಶ್ನೆ ಪತ್ರಿಕೆಯಲ್ಲಿ ಅದಕ್ಕಾಗಿಯೇ ಖಾಲಿ ಬಿಟ್ಟಿರುವ ಸ್ಥಾನದಲ್ಲಿಯೇ ಮಾಡಬೇಕು.
10. ನಿಮ್ಮ ಎಲ್ಲಾ ಉತ್ತರಗಳನ್ನು ಕೇವಲ (OMR) ಉತ್ತರ ಪತ್ರಿಕೆಯಲ್ಲಿಯೇ ನಮೂದಿಸಿ. ನಿಮ್ಮ ಉತ್ತರವನ್ನು ಎಚ್ಚರಿಕೆಯಿಂದ ನಮೂದಿಸಿ. ಉತ್ತರ ಬದಲಾಯಿಸಲು ಬಿಳಿಯ ಬಣ್ಣದ (Whitener) ಉಪಯೋಗ ನಿಷೇಧಿಸಲಾಗಿದೆ.

ಪರೀಕ್ಷಾರ್ಥಿಯ ಹೆಸರು (ದೊಡ್ಡ ಅಕ್ಷರಗಳಲ್ಲಿ) ______________________

ಕ್ರಮ ಸಂಖ್ಯೆ : (ಅಂಕೆಗಳಲ್ಲಿ) ______________________

: (ಅಕ್ಷರಗಳಲ್ಲಿ) ______________________

ಪರೀಕ್ಷಾ ಕೇಂದ್ರ (ದೊಡ್ಡ ಅಕ್ಷರಗಳಲ್ಲಿ) ______________________

ಪರೀಕ್ಷಾರ್ಥಿಯ ಸಹಿ ______________ ನಿರೀಕ್ಷಕರ ಸಹಿ ______________

Facsimile signature stamp of

Centre Superintendent : ______________________

ಅಭ್ಯರ್ಥಿಗಳು ಕನ್ನಡವನ್ನು ಭಾಷೆ-I ನ್ನಾಗಿ ಆಯ್ಕೆ ಮಾಡಿದ್ದಲ್ಲಿ, ಮುಂದಿನ ಭಾಗದಲ್ಲಿರುವ ಪ್ರಶ್ನೆಗಳಿಗೆ ಉತ್ತರಿಸತಕ್ಕದ್ದು. →

## ಭಾಗ IV

## ಭಾಷೆ I

## ಕನ್ನಡ

ನಿರ್ದೇಶನಗಳು : ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ 91 ರಿಂದ 99) ಅತ್ಯಂತ ಸೂಕ್ತವಾದುದನ್ನು ಆಯ್ದು ಉತ್ತರಿಸಿ :

ಜಗತ್ತು 'ಪೂಜಿಸುವುದು ಶಕ್ತಿಯನ್ನು; ದುರ್ಬಲತೆಯನ್ನಲ್ಲ ಎಂಬುದನ್ನು ಯುವಕರು ಸರಿಯಾಗಿ ತಿಳಿದಿರಬೇಕು. ಕ್ರಿಕೆಟ್ ಮೈದಾನದಲ್ಲಿ ದಾಂಡಿಗ ನಾಲ್ಕು ಸಿಕ್ಸರ್ ಬಾರಿಸಿದರೆ ಸಹಸ್ರಾರು ಯುವಕರು ಚಪ್ಪಾಳೆತಟ್ಟಿ, ಹುಚ್ಚೆದ್ದು ಕುಣಿದು ಅವನನ್ನು ಹೆಗಲ ಮೇಲೆರಿಸಿಕೊಂಡು ರಥೋತ್ಸವ ಮಾಡುವುದಿಲ್ಲವೇ ? ಅದು ಅವನ ಶಕ್ತಿ ಸಾಮರ್ಥ್ಯ, ದಕ್ಷತೆಗಳಿಗೆ ಸಲ್ಲಿಸಿದ ಗೌರವವಲ್ಲವೇ ? ಶಕ್ತಿಯನ್ನು ಎಲ್ಲರೂ ಭಕ್ತಿ ಗೌರವಗಳಿಂದ ನೋಡುತ್ತಾರೆ. 'ಶಕ್ತನಾದರೆ ನೆಂಟರೆಲ್ಲ ಹಿತರು, ಅಶಕ್ತನಾದರೆ ಆಪ್ತಜನರೇ ವೈರಿಗಳು' ಎಂದು ಪುರಂದರದಾಸರು ಹೇಳಿದ ಮಾತು ಎಷ್ಟು ಸತ್ಯ !. ತಂದೆ ತಾಯಂದಿರು ಪ್ರೀತಿಯಿಂದ ಸಾಕಿ ಸಲಹಿದ ಮಗು ಬೆಳೆದು ದುರ್ಬಲನೂ ರೋಗಿಷ್ಠನೂ ದಡ್ಡನೂ ಮೂರ್ಖನೂ ಆದರೆ ಏನೆನ್ನುವರು ಬಲ್ಲಿರಾ ? 'ಯಾಕಾಗಿ ಹುಟ್ಟಿದನಿವನು ಕುಲಕ್ಕೆ ಕಳಂಕ' ಎನ್ನುವರಲ್ಲವೇ ? ಹೌದು. ಶಕ್ತನಿಗೆ ಎಲ್ಲರೂ ಆಪ್ತರು. ಅಶಕ್ತನನ್ನು ಎಲ್ಲರೂ ತಿರಸ್ಕರಿಸುವರು. ಮೂಲೆಗೆ ತಳ್ಳುವರು. ದೇಹ ಮನಸ್ಸು ಸರಿಯಾಗಿರುವ ನಾವು ನಮಗೆ ಕೊಡ ಮಾಡಿದ ಅವಕಾಶಗಳನ್ನು ಸರಿಯಾಗಿ ಉಪಯೋಗಿಸಿ-ಕೊಂಡು ನಮ್ಮ ಶಕ್ತಿಯನ್ನು ಸರ್ವತೋಮುಖವಾಗಿ ಹೆಚ್ಚಿಸಿ ಕೊಳ್ಳಬೇಕಲ್ಲವೇ ? ದೈಹಿಕ, ಮಾನಸಿಕ, ಬೌದ್ಧಿಕ ಹಾಗೂ ನೈತಿಕ ಬಲಗಳ ಜೊತೆಗೆ ನಾವು ಆತ್ಮಶಕ್ತಿಯನ್ನು ಬೆಳೆಸಿಕೊಳ್ಳಬೇಕು. 'ಶಕ್ತಿಯೇಜೀವನ, ದುರ್ಬಲತೆಯೇ ಮರಣ' ಇದೊಂದು ದೊಡ್ಡ ಸತ್ಯ 'ಶಕ್ತಿ ಸೌಭಾಗ್ಯ ಚಿರಜೀವನದ ಒಳಗುಟ್ಟು. ದುರ್ಬಲತೆ-ಚಿಂತೆ, ದುಃಖಗಳ ಮೂಲ' ಎಂದ ಸ್ವಾಮಿ ವಿವೇಕಾನಂದರು 'ಬಲಿಷ್ಠರಾಗಿ, ಕಬ್ಬಿಣದ ಮಾಂಸಖಂಡ, ಉಕ್ಕಿನ ನರಮಂಡಲ, ವಿದ್ಯುತ್ತಿನ ಇಚ್ಛಾಶಕ್ತಿಯ ಬಲ ಇವುಗಳನ್ನು ಬೆಳೆಸಿಕೊಂಡು ನಿಮ್ಮ ಕಾಲ ಮೇಲೆ ನಿಲ್ಲಿ' ಎಂದು ತಿರುತಿರುಗಿ ಸಾರಿದರು. ದುರ್ಬಲನು ತಾನು ನಾಶವಾಗುವುದಲ್ಲದೆ ಇತರರಲ್ಲಿ ಶೋಷಣೆ ಮತ್ತು ಹಿಂಸೆಯ ಪ್ರವೃತ್ತಿಯನ್ನು ಹುಟ್ಟಿಸುತ್ತಾನೆ. ನಮ್ಮ ಪರಂಪರೆ ನೀಡುವ ಮುಖ್ಯ ಬೋಧನೆಯೇ ಶಕ್ತಿಯನ್ನು ಬೆಳೆಸಿಕೊಳ್ಳಿ ಎಂಬುದು. ನಿರ್ವೀರ್ಯನಾಗಬೇಡ. ದುರ್ಬಲ-ನಾಗಬೇಡ ಎಂದು ಶ್ರೀಕೃಷ್ಣ ಅರ್ಜುನನಿಗೆ ಬೋಧಿಸಿದ.

ನಮ್ಮನ್ನು ದುರ್ಬಲಗೊಳಿಸುವ ನೂರಾರು ಕತೆ, ಘಟನೆ, ಚಿತ್ರ, ಧಾರ್ಮಿಕ ಮತ್ತು ರಾಜಕೀಯದ ರಾಗದ್ವೇಷಗಳು ನಿತ್ಯವೂ ಪ್ರಸಾರವಾಗುತ್ತಿರ-ಬಹುದು. ಅವು ಯುವಕರ ಮನಸ್ಸನ್ನು ತಲ್ಲಣ ಗೊಳಿಸಲೂ ಬಹುದು. ಆದರೆ ಬದುಕು ಎಷ್ಟೇ ನಿರಾಶಾದಾಯಕವಾದರೂ ಅದನ್ನು ದಾಟಿ ಮೇಲೇರಲು ಬೇಕಾದ ಶಕ್ತಿ ನಮ್ಮಲ್ಲೇ ಇದೆ. ನಮ್ಮ ಸಮೀಪದಲ್ಲೇ ಇದೆ. ನಮ್ಮ ಅಂತರ್ಯದ ಆಳದಲ್ಲೇ ಇದೆ. ಜಾತಿ, ಮತ, ಕುಲ, ಗೋತ್ರ ಭೇದವಿಲ್ಲದೆ ಪ್ರತಿಯೊಬ್ಬ ಮನುಷ್ಯನ ಮನಸ್ಸಿನ ಆಳದಲ್ಲಿ ಸಾವಿಲ್ಲದ, ನೋವಿಲ್ಲದ ದೈವೀಶಕ್ತಿ ಇದೆ. ಮನೋವಿಜ್ಞಾನಿ ಇಂದು ಈ ಮಾತನ್ನು ಹೇಳುವ ಸ್ಥಿತಿಯಲ್ಲಿದ್ದಾನೆ. ಒಟ್ಟಿನಲ್ಲಿ ನಮಗೆ ಬೇಕಾದ ಮಾರ್ಗದರ್ಶನ ಶಕ್ತಿ, ಸಹಾಯ ಸ್ಫೂರ್ತಿ, ಶಾಂತಿ ಇವೇ ಮೊದಲಾದವು ಬದುಕನ್ನು ಬೆಳಗುವ ಅಂಶಗಳು ನಮ್ಮಲ್ಲಿವೆ. ಇಂಥ ಅಪಾರ ಶಕ್ತಿಯನ್ನು ಒಳಗಡೆ ಇರಿಸಿಕೊಂಡು ಗುಲಾಮರಂತೆ ವರ್ತಿಸಲು ಕಾರಣವೇನು ? ಒಂದು:ಅಜ್ಞಾನ, ಇನ್ನೊಂದು :

ಬಾಲ್ಯದಿಂದ ಬೆಳೆಸಿಕೊಂಡು ಬಂದ ನಿಷೇಧಾತ್ಮಕ ಭಾವನೆ. ಪ್ರತಿಯೊಂದು ನಿಷೇಧಾತ್ಮಕ ಭಾವನೆ ಅಥವಾ ಯೋಚನೆ, ಒಳಗಿನ ಆ ಅಪಾರ ಶಕ್ತಿಯನ್ನು ಪರಿಮಿತ-ಗೊಳಿಸಿ ನಮ್ಮನ್ನು ದುರ್ಬಲರನ್ನಾಗಿ ಮಾಡುತ್ತದೆ. ಪ್ರತಿಯೊಂದು ಆತ್ಮವಿಶ್ವಾಸದ ಮತ್ತು ರಚನಾತ್ಮಕ ಯೋಚನೆ ನಮ್ಮ ಅಭ್ಯುದಯ ಅಭಿವೃದ್ಧಿಗೆ ನೆರವಾಗುತ್ತದೆ.

**91.** ಮೇಲಿನ ಪಠ್ಯದ ಪ್ರಕಾರ ಯಾರಿಗೆ ಎಲ್ಲರೂ ಆಪ್ತರು ?

(1) ಶಕ್ತರಿಗೆ

(2) ಸಶಕ್ತರಿಗೆ

(3) ಮೇಲಿನ ಎರಡೂ ಹೌದು

(4) ಮೇಲಿನ ಎರಡೂ ಅಲ್ಲ

**92.** ಮೇಲಿನ ಪಠ್ಯದ ಪ್ರಕಾರ "ಶಕ್ತಿಯೇ ಜೀವನ, ದುರ್ಬಲತೆಯೇ ಮರಣ" ಎಂಬುದು

(1) ಒಂದು ಹೇಳಿಕೆ

(2) ಒಂದು ಅಭಿಪ್ರಾಯ

(3) ಒಂದು ದೊಡ್ಡ ಸತ್ಯ

(4) ಎಲ್ಲವೂ ಹೌದು

**93.** ಮೇಲಿನ ಪಠ್ಯದ "ಶಕ್ತಿ ಸೌಭಾಗ್ಯ ಚಿರಜೀವನದ ಒಳಗುಟ್ಟು, ದುರ್ಬಲತೆ-ಚಿಂತೆ ದುಃಖಗಳ ಮೂಲ" ಎಂಬ ಹೇಳಿಕೆ ಯಾರದು ?

(1) ಸ್ವಾಮಿ ವಿವೇಕಾನಂದ

(2) ಸ್ವಾಮಿ ಸಿದ್ಧೇಶ್ವರಾನಂದ

(3) ಸ್ವಾಮಿ ಜಗದಾತ್ಮಾನಂದ

(4) ಸ್ವಾಮಿ ಶ್ರೀರಮಣಾನಂದ

**94.** ಅಪಾರ ಶಕ್ತಿಯಿದ್ದರೂ ಮನುಷ್ಯರು ಗುಲಾಮರಂತೆ ವರ್ತಿಸಲು ಕಾರಣ ?

(1) ಶೂನ್ಯ ಭಾವನೆ

(2) ನಿಷೇಧಾತ್ಮಕ ಭಾವನೆ

(3) ಅಪರಾಧಿ ಭಾವನೆ

(4) ಯಾವುದೂ ಅಲ್ಲ

**95.** ಮೇಲಿನ ಪಠ್ಯದಲ್ಲಿ ಹೇಳಿರುವ ಹಾಗೆ ದುರ್ಬಲರು ತಾವು ನಾಶವಾಗುವುದಲ್ಲದೆ ಇತರರಲ್ಲಿ ಹುಟ್ಟಿಸುವ ಗುಣಗಳು ಯಾವುವು ?

(1) ಶೋಷಣೆ ಮತ್ತು ಹಿಂಸೆಯ ಪ್ರವೃತ್ತಿ

(2) ದಯೆ ಮತ್ತು ಪ್ರೀತಿ

(3) ಶೋಕ ಮತ್ತು ದುಮ್ಮಾನ

(4) ಮೇಲಿನ ಯಾವುದೂ ಅಲ್ಲ

**96.** ದುರ್ಬಲತೆ ಪದದ ವಿರುದ್ಧಾರ್ಥಕ ಪದ

(1) ಶಕ್ತತೆ

(2) ಸಶಕ್ತತೆ

(3) ಶಕ್ತಿವಂತಿಕೆ

(4) ಸಬಲತೆ

**97.** ರಥೋತ್ಸವ

(1) ಲೋಪ ಸಂಧಿ

(2) ಆಗಮ ಸಂಧಿ

(3) ಗುಣ ಸಂಧಿ

(4) ಆದೇಶ ಸಂಧಿ

**98.** ಜಗತ್ತು ಪೂಜಿಸುವುದು ಏನನ್ನು ?

(1) ಲವಲವಿಕೆಯನ್ನು

(2) ಜನಪ್ರಿಯತೆಯನ್ನು

(3) ಸಂಪತ್ತನ್ನು

(4) ಶಕ್ತಿಯನ್ನು

99. ಅಶಕ್ತರನ್ನು ಕುರಿತು ಪುರಂದರದಾಸರು ಏನೆಂದು ಹೇಳಿದ್ದಾರೆ ?
(1) ಅಶಕ್ತನಿಗೆ ಆಪ್ತಜನರು ಬೆಂಬಲಿಸುತ್ತಾರೆ
(2) ಅಶಕ್ತನಾದರೆ ಆಪ್ತಜನರೇ ವೈರಿಗಳು
(3) ಅಶಕ್ತವಾದರೆ ನೆಂಟರೆಲ್ಲ ಹಿತರು
(4) ಎಲ್ಲವೂ ಹೌದು

ನಿರ್ದೇಶನಗಳು : ಕೆಳಗೆ ಕೊಟ್ಟಿರುವ ಕವನವನ್ನು ಓದಿ ಅದರ ಮುಂದೆ ಕೊಟ್ಟಿರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ 100 ರಿಂದ 105) ಅತ್ಯಂತ ಸೂಕ್ತವಾದುದನ್ನು ಆಯ್ದು ಉತ್ತರಿಸಿ :

೧

ಜಗವೆಲ್ಲ ನಗುತಿರಲಿ,
ಜಗದಳುವು ನನಗಿರಲಿ !
ನಾನಳಲು ಜಗವೆನ್ನನೆತ್ತಿಕೊಳದೇ ?
ನಾ ನಕ್ಕು, ಜಗವಳಲು, ನೋಡಬಹುದೇ ?

೨

ತೆರವಾಗಿ ನನ್ನೆದೆಯು,
ಧರೆಯೆದೆಯು ಉಕ್ಕಿರಲಿ !
ಧರೆಯೊಳಗೆ ತೇಲಿಸುವೆನೆನ್ನೆದೆಯನು !
ಧರೆ ಬತ್ತಿ, ಎನ್ನೆದೆಯು ಉಕ್ಕಲೇನು ?

೩

ಪೊಡವಿಯ್ಯೆಸಿರಿವಡೆದು,
ಬಡತನವು ನನಗಿರಲಿ !
ಕೈಯೊಡ್ಡೆ, ಪೊಡವಿಯೆನಗಿಕ್ಕದೇನು ?
ಪೊಡವಿಯೇ ಮೈಯಳಿಯೆ, ಮಾಡಲೇನು ?
ವಿಶ್ವವನು ತುಂಬಿರುವ
ಈಶ್ವರನೆ ಅಳತೊಡಗೆ,
ಸೈತಿಡಲು, ಸೈಪಿಡಲು, ಬರುವನಾವಂ ?
ಹೇ, ತಂದೆ, ಎನಲೆನ್ನನವನೆ ಕಾವಂ !

100. "ಧರೆಯೆದೆಯು ಉಕ್ಕಿರಲಿ" ಎನ್ನುವಲ್ಲಿ ಕವಿಯ ಆಶಯ
(1) ಧರೆಯಲ್ಲಿ ಸಂತೋಷವು ತುಂಬಿಬರಲಿ
(2) ಧರೆಯಲ್ಲಿ ಸಂತೋಷವು ಉಡುಗಿ ಬರಲಿ
(3) ಎರಡೂ ಹೌದು
(4) ಯಾವುದೂ ಅಲ್ಲ

101. "ಪೊಡವಿಯ್ಯೆಸಿರಿವಡೆದು" ಎಂಬಲ್ಲಿ ಕವಿಯ ಆಶಯ
(1) ಪೊಡವಿ ಒಣಗಲಿ
(2) ಪೊಡವಿ ಬರುಡಾಗಲಿ
(3) ಪೊಡವಿ ಶ್ರೀಮಂತವಾಗಲಿ
(4) ಪೊಡವಿ ಬರಿದಾಗಲಿ

102. ಪೊಡವಿಯ್ಯೆಸಿರಿ ಪದವು ಯಾವ ಸಂಧಿಯ ಉದಾಹರಣೆ ?
(1) ಗುಣ ಸಂಧಿ
(2) ಆಗಮ ಸಂಧಿ
(3) ಸವರ್ಣ ದೀರ್ಘಸಂಧಿ
(4) ಲೋಪ ಸಂಧಿ

103. "ಪೊಡವಿಯೇ ಮೈಯಳಿಯೆ" ಎನ್ನುವಲ್ಲಿನ ಅರ್ಥ
(1) ಪೊಡವಿಯ ಗಾತ್ರ ಕುಗ್ಗಿದೆ
(2) ಪೊಡವಿಯೇ ಸೊರಗಿದೆ
(3) ಪೊಡವಿಯೇ ನಾಶವಾಗಿದೆ
(4) ಎಲ್ಲವೂ ಹೌದು

**104.** ಜಗತ್ತನ್ನು ಕುರಿತು ಕವಿಯ ಆಶಯವೇನು ?

(1) ಜಗತ್ತು ಅಳುತ್ತಿರಲಿ

(2) ಜಗತ್ತೆಲ್ಲ ನಗುತ್ತಿರಲಿ

(3) ಎರಡೂ ಹೌದು

(4) ಯಾವುದೂ ಅಲ್ಲ

**105.** "ಜಗದಳುವು" ಎನ್ನುವ ಪದದ ಅರ್ಥ

(1) ಜಗದ ಸಂತೋಷ

(2) ಜಗದ ಉಳುವು

(3) ಜಗದ ನಡವಳಿಕೆ

(4) ಜಗದ ದುಃಖ

ನಿರ್ದೇಶನಗಳು : ಮುಂದಿನ ಪ್ರಶ್ನೆಗಳಿಗೆ ಅವುಗಳ ಕೆಳಗೆ ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದುದನ್ನು ಆಯ್ದು ಉತ್ತರಿಸಿ :

**106.** ಓದುವ ಕ್ರಿಯೆಯಲ್ಲಿ ಈ ಕೆಳಗಿನ ಒಂದು ಅಂಶವು ವಾಕ್ಯದ ವಿವಿಧ ಭಾಗಗಳ ಜೊತೆಗಿನ ಸಂಬಂಧವನ್ನು ಅರ್ಥ ಮಾಡಿಕೊಳ್ಳಲು ಸಹಾಯ ಮಾಡುತ್ತದೆ.

(1) ಕ್ರಿಯಾವಿಶೇಷಣಗಳು

(2) ಸರ್ವನಾಮಗಳು

(3) ಅಂಕಿತನಾಮಗಳು

(4) ಕ್ರಿಯಾಪದಗುಚ್ಛ

**107.** ಕೆಳಗಿನ ವಾಕ್ಯಗಳಲ್ಲಿ ಯಾವುದು ಸರಿ ? [ಸುಳಿವು : ಬಸ್ಸು ಹತ್ತರ ಯಾರು ಓಡುತ್ತಿದ್ದಾರೆ ಎಂಬುದನ್ನು ಗಮನಿಸಿ ]

(1) ಬಸ್ ಹತ್ತಲು ಆತುರಪಟ್ಟು ವಯಸ್ಸಾದವನು ಜಾರಿಬಿದ್ದನು.

(2) ಬಸ್ ಹತ್ತಲು ಆತುರಪಟ್ಟು ವಯಸ್ಸಾದವನ ಪರ್ಸ್ ಜೇಬಿನಿಂದ ಕೆಳಗೆ ಬಿತ್ತು.

(3) ಬಸ್ ಹತ್ತಲು ಆತುರಪಟ್ಟು ವಯಸ್ಸಾದವನ ಮುಖ ಬೆವರಿನಿಂದ ತುಂಬಿದೆ.

(4) ಬಸ್ ಹತ್ತಲು ಅವಸರಪಟ್ಟು ವಯಸ್ಸಾದವನು ಮುಂಬರುವ ದಿನಗಳನ್ನು ಶಪಿಸಿದನು.

**108.** ಕೆಳಗಿರುವ ಎಲ್ಲ ಹೇಳಿಕೆಗಳು ಶ್ರವಣ-ನಡವಳಿಕೆಯ ವಿವರಣೆಗಳು. ಆದರೆ ಇದೊಂದು ಅಲ್ಲ.

(1) ಎಚ್ಚರಿಕೆಯಿಂದ ಕೇಳಿಸಿಕೊಳ್ಳುವುದು ಮಾತನಾಡುವವನ ಉದ್ದೇಶವನ್ನು ಗುರುತಿಸಲು ಸಹಾಯಮಾಡುತ್ತದೆ.

(2) ಜನರು ಕೇಳುವಿಕೆಯಲ್ಲಿ ಆಯ್ಕೆಯನ್ನು ತೋರಿಸುತ್ತಾರೆ ಮತ್ತು ಬೇಡ-ವಾದುದನ್ನು ಕೇಳದೇ ಕೈಬಿಡುತ್ತಾರೆ.

(3) ಉತ್ತಮ ಶ್ರವಣ ಸಾಮರ್ಥ್ಯ ಯಾವುದೇ ತರಬೇತಿ ಇಲ್ಲದೆ ಹುಟ್ಟಿನಿಂದಲೇ ಬರುತ್ತದೆ.

(4) ಶ್ರವಣ ಕ್ರಿಯೆಯು ಸಂವಹನ-ಕ್ರಿಯೆಯ ಅರ್ಧಭಾಗವನ್ನು ಪೂರೈಸುತ್ತದೆ.

109. ಭಾಷಾತರಗತಿಯಲ್ಲಿ ಉಚ್ಚಾರಣೆಯನ್ನು ಬೋಧಿಸುವಾಗ ನೀವು ಹೀಗೆ ಮಾಡಬಹುದು.

(1) ವಿದ್ಯಾರ್ಥಿಗಳಿಗೆ ಅದೇ ಬಗೆಯ ಪದಗಳನ್ನು ಹುಡುಕಲು ಹೇಳುವುದು.

(2) ಅದರ ಅರ್ಥವನ್ನು ವಿವರಿಸುವುದು.

(3) ಸರಿಯಾದ ಉಚ್ಚಾರಣೆಯನ್ನು ನುಡಿದು ಮತ್ತೆ ಮತ್ತೆ ಮನನ ಮಾಡಿಕೊಡುವುದು.

(4) ಇದು ವಿದೇಶಿ ಪದವೆಂದು ತಿಳಿಸುವುದು.

110. ಕಥೆಯೊಂದರ ತಲೆಬರಹ ಕಥಾವಸ್ತು ಮತ್ತಿತರ ಚಿತ್ರರೂಪಗಳನ್ನು ಆಧರಿಸಿ ಕಥೆಯನ್ನು ಕುರಿತು ಯೋಚಿಸುವ ಪ್ರಕ್ರಿಯೆ. ಈ ಬಗೆಯ ಓದಿನ ಚಟುವಟಿಕೆಯನ್ನು _____ ಎಂದು ಕರೆಯುತ್ತಾರೆ.

(1) ದೃಶ್ಯೀಕರಣ

(2) ಪದಾಕ್ರಮಣ

(3) ಪೂರ್ವ ಜ್ಞಾನದ ಬಳಕೆ

(4) ಭವಿಷ್ಯ ಕಥನ

111. ಹೋಟೆಲ್ ವೊಂದರಲ್ಲಿನ ಈ ಪ್ರಕಟಣೆಯನ್ನು ಗಮನಿಸಿ. ಯಾವ ಸಾಲು (ಗಳು) ತಪ್ಪಿವೆ ಎಂಬುದನ್ನು ಗುರುತಿಸಿ.

ಬಿಸಿಬಿಸಿ ಬೆಣ್ಣೆದೋಸೆಯ ರುಚಿ ನೋಡಿ
ಬಿಸಿಯಾಗಿರುವ ಮಿರ್ಚಿ ಭಜಿ ಸವಿಯಿರಿ
ಇವರೆಲ್ಲವೂ ಚೆನ್ನಾಗಿದೆ

(1) ಸಾಲು 1 ಮತ್ತು 2

(2) ಸಾಲು 1 ಮಾತ್ರ

(3) ಸಾಲು 1 ಮತ್ತು 3

(4) ಸಾಲು 3 ಮಾತ್ರ

112. 'ಪ್ರಿನ್ಸಿಪಲ್ ಆಫ್ ಡಿಸ್ಕವರಿ' ಯ ಪ್ರಕಾರ ವಿದ್ಯಾರ್ಥಿಗಳು ತರಗತಿಯಲ್ಲಿ _____

(1) ಸೂಕ್ತ ಸಹಯೋಗಪೂರ್ಣ ವ್ಯಾಕರಣಾ-ಧಾರಿತ ಚಟುವಟಿಕೆಯಲ್ಲಿ ತೊಡಗಿಕೊಳ್ಳಬೇಕು.

(2) ಹಲವಾರು ಉದಾಹರಣೆಗಳ ಮೂಲಕ ಸೂತ್ರೀಕರಿಸಬೇಕು.

(3) ಯಾವುದೇ ಕೆಲಸ ಮುಗಿಸುವಾಗ ವ್ಯಾಕರಣಾತ್ಮಕವಾಗಿ ಯೋಚಿಸಬೇಕು.

(4) ವಿದ್ಯಾರ್ಥಿಗಳು ತಮ್ಮ ಗುರುಗಳ ಮೂಲಕ ತಪ್ಪುಗಳನ್ನು ತಿದ್ದಿಕೊಳ್ಳಬೇಕು.

113. 'ಕೈನೆಸ್ಥೆಟಿಕ್ ಇಂಟೆಲಿಜೆನ್ಸ್' ಎನ್ನುವುದು ಒಂದು ಬಗೆಯ ಕಲಿಕಾ ಸಾಮರ್ಥ್ಯ. ಇದರಲ್ಲಿ ವಿದ್ಯಾರ್ಥಿಗಳು

(1) ಚಿತ್ರಗಳ ಸಹಾಯವಿಲ್ಲದೆ ಶ್ರವಣ-ಕಲೆಯನ್ನು ಸಿದ್ಧಿಸಿಕೊಳ್ಳುತ್ತಾರೆ.

(2) ಕಣ್ಣು ಮತ್ತು ಕೈನ ಸಹಯೋಗ-ದೊಂದಿಗೆ ಚಲನಾತ್ಮಕವಾಗಿ ತಮ್ಮನ್ನು ಅಭಿವ್ಯಕ್ತಿಸಿಕೊಳ್ಳುವುದನ್ನು ಕಲಿತು-ಕೊಳ್ಳುತ್ತಾರೆ.

(3) ಸಂಗೀತದಲ್ಲಿ ತೊಡಗಿಕೊಂಡಿದ್ದು ಶಬ್ದ ತಾಳ ಮತ್ತು ವಿನ್ಯಾಸಗಳ ಮೂಲಕ ಯೋಚಿಸುತ್ತಾರೆ.

(4) ಪರಿಕಲ್ಪನಾತ್ಮಕವಾಗಿ ಗಣಿತಾತ್ಮಕ ವಿನ್ಯಾಸಗಳೊಂದಿಗೆ ಮಾಹಿತಿ-ಯೊಂದರ ತುಣುಕುಗಳನ್ನು ಜೋಡಿಸಿಕೊಳ್ಳುತ್ತಾರೆ.

114. ವಿದ್ಯಾರ್ಥಿಯೊಬ್ಬನ ವಿಶೇಷ ಶೈಕ್ಷಣಿಕ ಕೌಶಲ್ಯವು ಈ ಅಂಶವನ್ನು ಒಳಗೊಳ್ಳುತ್ತದೆ.

(1) ಅನಿರೀಕ್ಷಿತ ಮತ್ತು ಕೆಲವು ಬಾರಿ ತುಚ್ಛ ಎನಿಸುವ ಪ್ರತಿಕ್ರಿಯೆಗಳು.

(2) ಇತರರ ಸಾಮರ್ಥ್ಯ ಮತ್ತು ಕೌಶಲ್ಯಗಳನ್ನು ಗುರುತಿಸುವ ಬಗೆ.

(3) ಅತ್ಯುತ್ತಮ ದೈಹಿಕ ಲಕ್ಷಣಗಳು.

(4) ತನ್ನ ಆಸಕ್ತಿಯ ಕ್ಷೇತ್ರದಲ್ಲಿ ದೀರ್ಘ-ಕಾಲದ ಪರಿಶ್ರಮ.

115. ಗತ ಅನುಭವವನ್ನು ಆಧರಿಸಿದ ಒಳ್ಳೆಯ ಕನ್ನಡ ಸಂವಹನವನ್ನು ಈ ರೀತಿ ಕರೆಯಬಹುದು.

(1) ಪರಿಕಲ್ಪನೆಯನ್ನು ರೂಪಿಸುವುದು

(2) ಕಲಿಕೆಯ ವರ್ಗಾವಣೆ

(3) ಪ್ರಶ್ನಿಸುವ ವಿಧಾನ

(4) ತತ್ಕಾಲ ಪ್ರದರ್ಶನ

116. ಪ್ರಚೋದನೆಯನ್ನು ಕೌಶಲ್ಯ ಅಭಿವೃದ್ಧಿಗೆಂದು ಬಳಸಿಕೊಳ್ಳುವ ಶಿಕ್ಷಕ ತರಬೇತಿ ವಿಧಾನ ಯಾವುದೆಂದರೆ

(1) ಪಾಠ ಯೋಜನೆ

(2) ದೃಶ್ಯ ಸುರುಳಿ ಪ್ರದರ್ಶನ ನೋಡುವುದು

(3) ಮೈಕ್ರೊ ಟೀಚಿಂಗ್

(4) ಒಳ್ಳೆಯ ಬೋಧನಾ ಟಿಪ್ಪಣಿಗಳನ್ನು ಮಾಡಿಕೊಳ್ಳುವುದು

117. ಬರವಣಿಗೆ ಚಟುವಟಿಕೆಯ ಯಾವ ಹಂತದಲ್ಲಿ ಫ್ರೀರೈಟಿಂಗ್, ಬ್ರೇನ್-ಸ್ಟಾರ್ಮಿಂಗ್, ಕ್ಲಸ್ಟರಿಂಗ್ ಮತ್ತು ಐಡಿಯಾ-ಮ್ಯಾಪಿಂಗ್ ಅತಿಮುಖ್ಯವಾದ ಅಂಶಗಳು.

(1) ಪೂರ್ವಬರಹ (ಪ್ರಿ ರೈಟಿಂಗ್)

(2) ಕರಡು ರಚನೆ

(3) ಪರಿಷ್ಕರಣೆ

(4) ಕರಡು ತಿದ್ದುವುದು

118. ಈ ಕೆಳಗೆ ಕೊಟ್ಟಿರುವ ಪದಗಳ ವ್ಯಾಕರಣ-ವರ್ಗ ಯಾವುದು ?

ಚೆನ್ನಾಗಿ, ನಿಧಾನವಾಗಿ, ಕೋಪದಿಂದ, ಎಲ್ಲಿಂದರಲ್ಲಿ, ಹೇಗಾದರೂ, ಹೊರಗೆ, ಜೋರಾಗಿ, ಗಟ್ಟಿಯಾಗಿ, ತಡವಾಗಿ, ತಕ್ಷಣ,

(1) ನಾಮಪದಗಳು

(2) ಕ್ರಿಯಾಪದಗಳು

(3) ಕ್ರಿಯಾವಿಶೇಷಣಗಳು

(4) ಸರ್ವನಾಮಗಳು

119. ಬರವಣಿಗೆಯ ಚಟುವಟಿಕೆಯನ್ನು ಹೀಗೆ ಅನುಕ್ರಮಿಸಬಹುದು

(1) ಸಂಗ್ರಹಿಸುವುದು, ಅನುಕ್ರಮಿಸುವುದು, ಕರಡು ರಚನೆ, ಕರಡುಪುನರ್ ರಚನೆ.

(2) ಸಂಗ್ರಹಿಸುವುದು, ಅನುಕ್ರಮಿಸುವುದು, ಕರಡುಪುನರ್ ರಚನೆ, ಕರಡು ರಚನೆ.

(3) ಅನುಕ್ರಮಿಸುವುದು, ಸಂಗ್ರಹಿಸುವುದು, ಕರಡು ರಚನೆ, ಕರಡುಪುನರ್ ರಚನೆ.

(4) ಕರಡು ರಚನೆ, ಸಂಗ್ರಹಿಸುವುದು, ಅನುಕ್ರಮಿಸುವುದು, ಕರಡುಪುನರ್ ರಚನೆ.

120. ಭಾಷಾತರಗತಿಯಲ್ಲಿ ಸಾಹಿತ್ಯವು ವಿದ್ಯಾರ್ಥಿಗಳಿಗೆ ______

(1) ಅಗತ್ಯವಿರುವ ಸಾಂಸ್ಕೃತಿಕ ತೆರೆದು-ಕೊಳ್ಳುವಿಕೆಗೆ ಅವಕಾಶ ಕೊಡುವುದಿಲ್ಲ.

(2) ಭಾಷೆಯಲ್ಲಿನ ಅಧಿಕೃತ ವೈವಿಧ್ಯತೆ-ಯನ್ನು ತೆರೆದಿಡುತ್ತದೆ.

(3) ಹಳೆ ಶೈಲಿಯ ಓದಿನ ಬಗೆಯನ್ನು ತಿಳಿಸುವುದಿಲ್ಲ.

(4) ಕಠಿಣತಮ ಪದಗಳನ್ನು ತೆರೆದಿಡುತ್ತದೆ.

ಅಭ್ಯರ್ಥಿಗಳು ಕನ್ನಡವನ್ನು ಭಾಷೆ-II ನ್ನಾಗಿ ಆಯ್ಕೆ ಮಾಡಿದ್ದಲ್ಲಿ, ಮುಂದಿನ ಭಾಗದಲ್ಲಿರುವ ಪ್ರಶ್ನೆಗಳಿಗೆ ಉತ್ತರಿಸತಕ್ಕದ್ದು. →

# ಭಾಗ V

## ಭಾಷೆ II

### ಕನ್ನಡ

ನಿರ್ದೇಶನಗಳು : ಕೊಟ್ಟಿರುವ ಗದ್ಯವನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ 121 ರಿಂದ 129) ಉತ್ತರಿಸಿ :

ಭಾನುವಾರ ಅಭ್ಯಂಜನಕ್ಕೆ ಅರ್ಧ ಡಬ್ಬ ಹರಳೆಣ್ಣೆ, ಎರಡು ಬುತ್ತಿ ಸೀಗೆಪುಡಿ ಮನೆ ಲೆಕ್ಕಕ್ಕೆ ಖರ್ಚು. ನಾವು ಏಳೆಂಟು ಜನ ಹುಡುಗರು ಜತೆಗೆ ದೊಡ್ಡವರೂ ; ಅಪ್ಪಯ್ಯ ಚಿಕ್ಕಪ್ಪಯ್ಯ ಸಣ್ಣಚಿಕ್ಕಯ್ಯ ಹೋಗಬೇಕು. ಎಷ್ಟೋ ಸಾರಿ ಅವರು ಮರುದಿನವೇ ಜ್ವರ ಬಂದು ಹಾಸಿಗೆ ಹಿಡಿದಿರುವುದು ಉಂಟು ! ಮತ್ತೆರೆಡು ಆಳುಗಳು ನೀರು ಸರಿಪಡಿಸುವುದು, ಅಂದರೆ ಹಂಡೆಗಳಲ್ಲಿ ಕುದಿಯುವ ನೀರನ್ನು ತೆಗೆದು, ಬೇರೆ ಕಡಾಯಗಳಿಗೆ ಹಾಕಿ, ತಣ್ಣೀರು ಬೆರೆಸಿ ಹದ ಮಾಡುವರು. ನೀರು ಬೆರೆಸಲು ಒಂದು ದೊಡ್ಡ ಅಗಲವಾದ ಬಾಯಿ ಇರುವ ಕಡಾಯಿ; ಅಲ್ಲದೇ ಒಂದು ದೋಣಿ ಸುಮಾರು ಹನ್ನೆರಡು ಹದಿಮೂರು ಅಡಿಗಳಷ್ಟು ಉದ್ದದ್ದು. ಆ ದೋಣಿ ಏಕೆ ಅನ್ನುವಿರೋ ? ಎಣ್ಣೆ ಹಚ್ಚಿಕೊಂಡು ಮೈ ಚೆನ್ನಾಗಿ ನೆನೆದ ಮೇಲೆ ಅದರಲ್ಲಿ ಮಲಗಿಕೊಳ್ಳುವುದು ಅಭ್ಯಂಜನದ ಪ್ರಮುಖ ಅಂಗ. ನೀರು ಬಿಸಿಬಿಸಿ-ಯಾಗಿರುವುದು. ಅದನ್ನು ಬಿಸಿನೀರು ಎಂದರೆ ತಪ್ಪಾಗಬಹುದು. ಸುಡುನೀರು ಎನ್ನುವುದೇ ಉತ್ತಮ ಮತ್ತು ಸತ್ಯಕ್ಕೆ ಸಮೀಪವಾದುದು. ಅಭ್ಯಂಜನದಲ್ಲಿ ಬಿಸಿನೀರನ್ನು ಉಪಯೋಗಿ-ಸುವುದೇ ಇಲ್ಲ; ಎಲ್ಲಾ ಸುಡುನೀರೆ ! ಎಷ್ಟೋ ಸಾರಿ ಹುಡುಗರನ್ನು ಬಲವಂತದಿಂದ ಎಳೆದುಕೊಂಡು ಹೋಗಿ ಅದರಲ್ಲಿ ಅದ್ದಿದಾಗ ಕಿಟ್ಟನೆ ಕಿರಿಚಿಕೊಂಡು ಕೆಳಗೆ ಹಾರಿ ಕಲ್ಲಿನ ಮೇಲೆ ಬಿದ್ದು ಗಾಯ ಮಾಡಿಕೊಂಡಿರುವ ಪ್ರಸಂಗವೂ ಉಂಟು. ಇಷ್ಟೊಂದು ವಿಧವಿಧ-ವಾದ ಪಾತ್ರೆಗಳಿಗೆ ನೀರು ಹಾಕುವುದು ಇಬ್ಬರಾಳುಗಳಿಗೆ ಸಾಕುಸಾಕಾಗಿ ಹೋಗುತ್ತದೆ.

ಅತ್ತ ಐಗಳು ಕಿರಿಯರಿಗೆ ಎಣ್ಣೆ ಹಚ್ಚಿಹಚ್ಚಿ ಬಿಡುತ್ತಿರುವರು. ಅದೊಂದು ದೊಡ್ಡ ಗೋಳು. ತಿಮ್ಮು ಎಣ್ಣೆ ಹಚ್ಚಿಸಿಕೊಳ್ಳುತ್ತಾ ಕಿಟ್ಟನೆ ಕಿರುಚಿದ. ಏಕೆಂದರೆ ಮೊನ್ನೆ ಮಾವಿನಮರದಿಂದ ಕೆಳಗೆ ಹಾರಿದಾಗ ಬಿದ್ದು ಗಾಯವಾಗಿದ್ದನ್ನು ಯಾರಿಗೂ ಹೇಳದೇ ಮುಚ್ಚಿಟ್ಟಿದ್ದ. ಐಗಳು ಅದನ್ನು ಅರಿಯದೇ ಕುದುರೆಗೆ ಮಾಲೀಸು ಮಾಡುವಂತೆ ಎಣ್ಣೆ ತಿಕ್ಕಿಯೇ ತಿಕ್ಕಿದರು. ಹಾಗೆ ಮಾಡುವಾಗ ಕೀತುಹೋದ ಗಾಯ ಹಿಸಿದುಕೊಂಡು ಇದ್ದಕ್ಕಿದ್ದಂತೆ ದೃಗ್ಗೋಚರವಾಯ್ತು. ಅಂತು ಗಾಯದ ನೋವಿಗೆ ಗುಟ್ಟು ರಟ್ಟಾಯಿತು ಎಂದೂ ಗೋಳೋ ಎಂದು ಅಳುತ್ತಿದ್ದ. ಅವನನ್ನು ಸಮಾಧಾನ ಮಾಡಿದ್ದೇ ತಡ ವಾಸು ಕೂಗುತ್ತಿದ್ದಾನೆ. ಏನು ? ತಲೆಗೆ ಹಾಕಿದ ಎಣ್ಣೆ ಶಿವನ ತಲೆಯ ಜಟೆಯಿಂದ ಹೊರಟ ಶ್ರೀಮದ್ ಗಂಗೆಯಂತೆ ಕೇಶರಾಶಿಗಳಿಂದ ಉಚ್ಚಳಿಸಿ ಲಲಾಟದ ಮಾರ್ಗವಾಗಿ ಭ್ರೂಮಧ್ಯ ಇಳಿದು ಕಮಲನಯನಗಳನ್ನು ಪ್ರವೇಶಿಸಿ ಬಿಟ್ಟಿತು. ನೆಗೆದು ನೆಗೆದು ಬಿದ್ದು ಬಿದ್ದು ಕಿರುಚಿಕೊಳ್ಳುತ್ತಿದ್ದಾನೆ. ಬಟ್ಟೆಯಿಂದ ಕಣ್ಣು ಜಜ್ಜಿಹೋಗುವಂತೆ ಒರೆಸಿದ್ದಾಯಿತು. ಆದರೆ ಈ ಗಲಾಟೆಯಲ್ಲಿ ತಲೆಯಲ್ಲಿದ್ದ ಕಜ್ಜಿಯ ಜ್ಞಾಪಕವೇ ಅವರಿಗಾಗಲಿಲ್ಲ. ಅದನ್ನು ಎಡಗೈಯಿಂದ ಬಲವಾಗಿ ಅದುಮಿದ್ದರಿಂದ ಅವನು ಮತ್ತೂ ಕುಣಿದು ಕೂಗತೊಡಗಿದ. ಹುಡುಗರ ಗುಂಪಿನಲ್ಲಿ ಹೀಗೆ ಘಟನೆಗಳು ಪ್ರಾಪ್ತವಾಗುತ್ತಿರಲಾಗಿ ದೊಡ್ಡವರ ಮೈಗೆ ಆಳುಗಳು ಎಣ್ಣೆ ಉಜ್ಜುತ್ತಿದ್ದಾರೆ. ಅಜ್ಜಯ್ಯ ದೂರದಲ್ಲಿ ಕುಳಿತು ಎಣ್ಣೆ ಉಜ್ಜಿಸಿ ಕೊಳ್ಳುತ್ತಿದ್ದಾರೆ. ಅವರ ಮೈಯೆಲ್ಲಾ ತೈಲಮಯ. ಆಳು ತಲೆಗೆ ಎಣ್ಣೆಹಾಕಿ ಪಟ್-ಪಟ್ ಎಂದು ಮದ್ದಲೆ ಬಡಿಯುವಂತೆ ಬಿಡುವಿಲ್ಲದೇ ಬಡಿಯುತ್ತಿದ್ದಾನೆ. ಆ ಏಟಿಗೆ

ಅಭ್ಯಾಸವಿಲ್ಲದವರಾಗಿದ್ದರೆ ಮೆದುಳು ಕದಡಿ ಹೋಗುತ್ತಿತ್ತು. ಆದರೆ ಅಜ್ಜಯ್ಯ ಅಚಲರಾಗಿ, ಧೀರರಾಗಿ ಕುಳಿತಿದ್ದಾರೆ.

ಈ ಮಧ್ಯೆ ಅವರು ಎಣ್ಣೆ ಹಚ್ಚಿಸಿಕೊಳ್ಳುವುದನ್ನು ಪ್ರಾರಂಭಿಸುವಾಗ ಮಾಡುವ ಕರ್ಮಕ್ರಿಯೆಗಳನ್ನು ಹೇಳಿದರೆ ಅಪ್ರಕೃತವಾಗದು. ಅಲ್ಲಿ ನೋಡಿ ! ಅವರ ಮುಂದೆ ನೆಲದ ಮೇಲೆ ಬೆರಳಿನಿಂದಿಟ್ಟ ಏಳು ಎಣ್ಣೆಯ ಚುಕ್ಕಿಗಳಿವೆ. ಅವು ಅಶ್ವತ್ಥಾಮ ಹನುಮಂತ ಮೊದಲಾದ ಪುರಾಣ ಪ್ರಸಿದ್ಧರಾದ ಸಪ್ತ ಚಿರಂಜೀವಿಗಳ ಸ್ಮಾರಕ ತೈಲಬಿಂದುಗಳು. ಅದಾದ ಮೇಲೆ ಅವರು ಏನೇನೋ ಹೇಳುತ್ತಾ ಎದೆ, ಹೊಟ್ಟೆ, ತೋಳು, ಬೆನ್ನು ಮೊದಲಾದ ಕಡೆ ಎಣ್ಣೆಯ ಬೊಟ್ಟನ್ನು ಇಟ್ಟುಕೊಂಡು ಆಳಿಗೆ ಎಣ್ಣೆ ಉಜ್ಜಲು ಅಪ್ಪಣೆ ಕೊಡುವರು. ಈ ಪ್ರಾರಂಭೋತ್ಸವವನ್ನು ಬಹಳ ಭಯಭಕ್ತಿಯಿಂದ ದೇವರನ್ನು ನೋಡುವಂತೆ ನೋಡುತ್ತಿದ್ದೆವು.

**121.** ಮೇಲಿನ ಗದ್ಯದಲ್ಲಿ ಅಭ್ಯಂಜನಕ್ಕೆ ಬಳಸುವ ಎಣ್ಣೆ

(1) ಕೊಬ್ಬರಿ ಎಣ್ಣೆ
(2) ಹರಳೆಣ್ಣೆ
(3) ಗಂಧ ಎಣ್ಣೆ
(4) ಸೀಮೆ ಎಣ್ಣೆ

**122.** ತಿಮ್ಮುವಿಗೆ ಎಣ್ಣೆಯನ್ನು ತಿಕ್ಕಿದ ರೀತಿ

(1) ಎತ್ತಿಗೆ ಮೈ ತಿಕ್ಕುವಂತೆ
(2) ಎಮ್ಮೆ ಮೈ ತೊಳೆಯುವಂತೆ
(3) ಕುದುರೆಗೆ ಮಾಲೀಸು ಮಾಡುವಂತೆ
(4) ಮಕ್ಕಳ ಮೈ ತಿಕ್ಕುವಂತೆ

**123.** ದೊಡ್ಡವರ ಮೈಗೆ ಎಣ್ಣೆ ಹಚ್ಚುತ್ತಿದ್ದವರು

(1) ಆಳುಗಳು
(2) ಚಿಕ್ಕ ಹುಡುಗರು
(3) ದೊಡ್ಡ ಹುಡುಗರು
(4) ವೃದ್ಧರು

**124.** ಆಳು ಅಜ್ಜಯ್ಯನ ತಲೆಗೆ ತೈಲ ಹಚ್ಚಿ ತಲೆ ಬಡಿಯುತ್ತಿದ್ದ ರೀತಿ ಹೇಗಿತ್ತು ?

(1) ತಬಲ ಬಡಿಯುವಂತೆ
(2) ತಟ್ಟೆ ಬಡಿಯುವಂತೆ
(3) ಡೊಳ್ಳು ಬಡಿಯುವಂತೆ
(4) ಮದ್ದಲೆ ಬಡಿಯುವಂತೆ

**125.** ಕಿರಿಯರಿಗೆ ಎಣ್ಣೆ ಹಚ್ಚುತ್ತಿದ್ದವರು

(1) ಐಗಳು
(2) ಆಳುಗಳು
(3) ಅಜ್ಜ
(4) ದೊಡ್ಡ ಹುಡುಗರು

**126.** ಫಟ್ ಫಟ್ ಎನ್ನುವುದು

(1) ಸಮಾಸ ಪದ
(2) ಅವ್ಯಯ
(3) ಅನುಕರಣ ಶಬ್ದ
(4) ಯಾವುದೂ ಅಲ್ಲ

**127.** ತಲೆಯಲ್ಲಿ ಕಜ್ಜಿಯ ಗಾಯವಾಗಿದ್ದು

(1) ಅಜ್ಜನಿಗೆ (2) ಲೇಖಕನಿಗೆ
(3) ಐಗಳಿಗೆ (4) ವಾಸುವಿಗೆ

**128.** ಮೇಲಿನ ಪಠ್ಯದಲ್ಲಿ 'ಅಭ್ಯಂಜನ' ಎಂದರೆ

(1) ಸ್ನಾನ
(2) ತಣ್ಣೀರು ಸ್ನಾನ
(3) ಎಣ್ಣೆ ಹಚ್ಚಿಕೊಂಡು ಮಾಡುವ ಬಿಸಿ ನೀರ ಸ್ನಾನ
(4) ಎಣ್ಣೆ ಹಚ್ಚಿಕೊಂಡು ಮಾಡುವ ಸುಡು ನೀರ ಸ್ನಾನ

**129.** ಇಬ್ಬರಾಳು ಪದ ಯಾವ ಸಂಧಿಗೆ ಉದಾಹರಣೆ ?

(1) ಆದೇಶ ಸಂಧಿ
(2) ಗುಣ ಸಂಧಿ
(3) ಲೋಪ ಸಂಧಿ
(4) ಆಗಮ ಸಂಧಿ

ನಿರ್ದೇಶನಗಳು : ಕೊಟ್ಟಿರುವ ಗದ್ಯವನ್ನು ಓದಿ ಕೆಳಗಿನ ಪ್ರಶ್ನೆಗಳನ್ನು (ಪ್ರಶ್ನೆ ಸಂಖ್ಯೆ 130 ರಿಂದ 135) ಉತ್ತರಿಸಿ :

ನನ್ನ ಓದಿನ ಆತ್ಮೀಯ ಸ್ಥಳವೆಂದರೆ 'ಪದ್ಮಾವತಿಯ ಗುಡ್ಡ.' ಪದ್ಮಾವತಿಯ ದೇವಸ್ಥಾನ ಜೈನರಿಗೆ ಸಂಬಂಧಿಸಿದ್ದು. ಪ್ರಶಾಂತವಾದ ಸ್ಥಳ. ದೊಡ್ಡದೊಡ್ಡ ಕಲ್ಲು ಬಂಡೆಗಳಿಂದ ತುಂಬಿದೆ. ಇಲ್ಲಿಯ 'ಅಳಬುರಕ ಕಲ್ಲು' ಹೆಸರುವಾಸಿ. ಈ ಸ್ಥಳಕ್ಕೆ ಜನ ಬರಲು ಹೆದರುತ್ತಿದ್ದರು. ಮೊದಮೊದಲು ನಮ್ಮ ಕೇರಿಯ ಒಬ್ಬನೇ ಒಬ್ಬ ವ್ಯಕ್ತಿ ಇಲ್ಲಿಗೆ ಓದಲು ಬರುತ್ತಿದ್ದ. ಜತೆಗೋಸ್ಕರ ಕೆಲವೊಮ್ಮೆ ನನ್ನನ್ನು ಕರೆದುತರುತ್ತಿದ್ದ. ಆತನ ಹೆಸರು ಇಟ್ಟಪ್ಪ. ಈತ ಈಗ ಬ್ಯಾಂಕ್ ನೌಕರ. ಈತನ ಓದುವ ಹವ್ಯಾಸವೇ ನನ್ನನ್ನು ಓದುವಂತೆ ಪ್ರೇರೇಪಿಸಿತು. ಈತನ ಓದು ಮುಗಿದ ಅನಂತರ ನಾನೊಬ್ಬನೇ ಎಷ್ಟೋ ಬಾರಿ ಅಲ್ಲಿಗೆ ಓದಲು ಹೋಗುತ್ತಿದ್ದೆ. ಈಗಂತೂ ಅದು ಓದುಗರ ಪವಿತ್ರ ಸ್ಥಳವಾಗಿದೆ. ಎಲ್ಲೆಂದರಲ್ಲಿ ಆ ಗುಡ್ಡದ ತುಂಬೆಲ್ಲ ಓದುಗರಿರುವುದು ನೋಡಿ ನನಗಂತೂ ಎಲ್ಲಿಲ್ಲದ ಹೆಮ್ಮೆ.

ನನ್ನೊಬ್ಬನ ಓದಿನ ದಿನಗಳಲ್ಲಿ ಕೇರಿಯ ಸ್ನೇಹಿತರೆಲ್ಲ ನನಗೆ ಹಂಗಿಸುತ್ತಿದ್ದರು. 'ನಾಳೆ ಇಂವ ಚೌಕಟ್ನ್ಯಾಗ ಬರ್ತಾನಪ್ಪ' ಎನ್ನುತ್ತಿದ್ದರು. 'ಮತ್ತೇನಪ್ಪಾ ಚೌಕಟ್' ಎಂದೇ ಮಾತನ್ನಾರಂಭಿಸುತ್ತಿದ್ದರು. ಎಂದರೆ ಓದಿ ರ್‍ಯಾಂಕ್ ಬರ್ತಾನೆ. ಆಗ ಈತನ ಫೋಟೋ ಪತ್ರಿಕೆಯಲ್ಲಿ ಬರುತ್ತದೆಂದು ಗೇಲಿ ಮಾಡುತ್ತಿದ್ದರು. ಆದರೆ ಪ್ರತಿ ವರ್ಷ ಪಾಸಾಗುತ್ತಾ ಹೋದಾಗ ಅನಂತರ ಅವರು ನನ್ನ ಹಾದಿಯನ್ನೇ ತುಳಿದರು. ನನ್ನ ಹಿಂದೆ ನನ್ನ ಕೇರಿಯ ಜನ; ಕೇರಿಯ ಜನಗಳ ಅನಂತರ ಊರ ಜನರೇ ಪದ್ಮಾವತಿಯ ಗುಡ್ಡಕ್ಕೆ ಬರಲು ಪ್ರಾರಂಭಿಸಿದರು.

ಮೊದಮೊದಲು ನಾನು ಪದ್ಮಾವತಿ ಗುಡ್ಡಕ್ಕೆ ಹೋಗುವಾಗ ಅದೊಂದು ಹೆದರಿಕೆಯ ತಾಣ ಎನಿಸುತ್ತಿತ್ತು. ಸುತ್ತೆಲ್ಲ ಹಾಸಿನಿಂತ ಬಂಡೆಗಳು, ಅದರ ಮೇಲೆ ನರ್ತನದ ಭಂಗಿಯಲ್ಲಿ ನಿಂತ ವಿಭಿನ್ನಾಕಾರದ ಕಲ್ಲು ಬಂಡೆಗಳು. ಅದರಲ್ಲಿಯೇ ಗುಹೆಗಳು, ಕಾಡು ಪ್ರಾಣಿಗಳು ಇವೆಲ್ಲವೂ ಹೆಚ್ಚು ಮನಸೆಳೆಯುವಂಥವು. ನಾನಂತೂ ಕಲ್ಲು ಪೊಟರೆಯ ಒಳಗೆ ಮಲಗಿ ಓದುತ್ತಿದ್ದೆ. ಐದು ಗಂಟೆಯೊಳಗಾಗಿಯೇ ಮನೆಯಲ್ಲಿರುತ್ತಿದ್ದೆ. ಒಮ್ಮೆ ನಿದ್ದೆ ಬಂದು ಕಲ್ಲಿನ ಬಂಡೆಯಡಿಯಲ್ಲಿಯೇ ಮಲಗಿಬಿಟ್ಟಿದ್ದೆ. ಎಚ್ಚರವಾದಾಗ ಕತ್ತಲಾಗಿ ಹೋಗಿದೆ ! ಎಚ್ಚರಾಗಿ ಎದ್ದು ಕುಳಿತಾಗ ಎದೆಯೊಡೆದು ನೀರಾಯಿತು. ಆ ಕಲ್ಲು ಗುಡ್ಡದ ನಡುವೆ ಎದ್ದೆನೋ ಬಿದ್ದೆನೋ ಎನ್ನುವ ಖಬರಿಲ್ಲದೆ ಸತ್ತೆನೋ ಕೆಟ್ಟೆನೋ ಎಂದು ಓಡೋಡಿ ಬಂದಿದ್ದೆ.

ಪರೀಕ್ಷೆ ಹತ್ತಿರ ಬಂತೆಂದರೆ ಸಾಕು. ನಾನು ತಲೆಯ ಕೂದಲನ್ನು ಪೂರ್ಣವಾಗಿ ತೆಗೆಯಿಸಿಕೊಳ್ಳುತ್ತಿದ್ದೆ. ಇದರಿಂದ ತಿರುಗಾಡುವುದಕ್ಕೆ, ಇನ್ನೊಬ್ಬರಿಗೆ ಮುಖ ತೋರಿಸುವುದಕ್ಕೆ ನಾಚಿಕೆಯಾಗುತ್ತಿತ್ತು. ಒಂದೆಡೆ ಹೆಚ್ಚು ಹೊತ್ತು ಕುಳಿತುಕೊಳ್ಳುವುದು ಅನಿವಾರ್ಯವಾಗುತ್ತಿತ್ತು. ಹೀಗಿದ್ದಾಗಲೂ ಊರಲ್ಲಿ ಅವಶ್ಯವಾಗಿ ಹೋಗಬೇಕಾಗಿ ಬಂದಾಗ ತಲೆಗೆ ಟೋಪಿ ಹಾಕಿಕೊಂಡು ಅದರ ಮೇಲೆ ಸ್ಕಾರ್ಫ್ ಸುತ್ತಿಕೊಳ್ಳುತ್ತಿದ್ದೆ. ಪರೀಕ್ಷೆಗೆ ಸಂಬಂಧಿಸಿದ ಪತ್ರಗಳನ್ನು ತರಲು ಕಾಲೇಜಿಗೆ ಹೋಗುವಾಗಲೂ ಇದೇ ರೀತಿ ಮಾಡುತ್ತಿದ್ದೆ.

**130.** ಮೇಲಿನ ಗದ್ಯದಲ್ಲಿ ಬರಹಗಾರ ಪದ್ಮಾವತಿಯ ಗುಡ್ಡಕ್ಕೆ ಹೋಗುತ್ತಿದುದು ಏತಕ್ಕೆ ?

(1) ಸಮಯ ಕಳೆಯಲು

(2) ಓದಲು

(3) ಸಂಶೋಧನೆ ಮಾಡಲು

(4) ಯಾವುದೂ ಅಲ್ಲ

131. ಈ ಗದ್ಯದ ಬರಹಗಾರನಿಗಿಂತಲೂ ಮೊದಲು ಪದ್ಮಾವತಿ ಗುಡ್ಡಕ್ಕೆ ಓದಲು ಹೋಗುತ್ತಿದ್ದ ವ್ಯಕ್ತಿ ಏನು ಕೆಲಸ ಮಾಡುತ್ತಿದ್ದಾರೆ ?
(1) ಅಧ್ಯಾಪಕ
(2) ಸಂಶೋಧಕ
(3) ಬ್ಯಾಂಕ್ ನೌಕರ
(4) ನಿರುದ್ಯೋಗಿ

132. ಪರೀಕ್ಷೆ ಮುಂದಿರುವಾಗ ಬರಹಗಾರ ಏನು ಮಾಡುತ್ತಿದ್ದನು ?
(1) ಕ್ಷೌರ ಮಾಡಿಸಿಕೊಳ್ಳುವುದು
(2) ತಲೆ ಕೂದಲನ್ನು ಪೂರ್ತಿಯಾಗಿ ತೆಗೆಸಿಕೊಳ್ಳುವುದು
(3) ಶೇವ್ ಮಾಡಿಸಿಕೊಳ್ಳುವುದು
(4) ಯಾವುದೂ ಅಲ್ಲ

133. ಎದ್ದೆನೋ ಬಿದ್ದೆನೋ ಎಂಬ ಪ್ರಯೋಗದ ಅರ್ಥ
(1) ತುಂಬ ಆವಸರ ಪಡುವುದು
(2) ತುಂಬ ಭಯಗೊಳ್ಳುವುದು
(3) ತುಂಬ ಸಂತಸಗೊಳ್ಳುವುದು
(4) ತುಂಬ ಅಚ್ಚರಿಗೊಳ್ಳುವುದು

134. 'ವಿಭಿನ್ನಾಕಾರ' ಪದ ಯಾವ ಸಂಧಿಗೆ ಉದಾಹರಣೆ
(1) ಗುಣ ಸಂಧಿ
(2) ಯಣ್ ಸಂಧಿ
(3) ಸವರ್ಣದೀರ್ಘಸಂಧಿ
(4) ಆದೇಶ ಸಂಧಿ

135. ಮೇಲಿನ ಪಠ್ಯದಲ್ಲಿ ಬರುವ ಪದ್ಮಾವತಿಯ ದೇವಸ್ಥಾನ ಯಾವ ಧರ್ಮಕ್ಕೆ ಸೇರಿದ್ದು ?
(1) ಸಿಖ್ ಧರ್ಮಕ್ಕೆ
(2) ಹಿಂದೂ ಧರ್ಮಕ್ಕೆ
(3) ಬೌದ್ಧ ಧರ್ಮಕ್ಕೆ
(4) ಜೈನ ಧರ್ಮಕ್ಕೆ

ನಿರ್ದೇಶನಗಳು : ಮುಂದಿನ ಪ್ರಶ್ನೆಗಳಿಗೆ ಅವುಗಳ ಕೆಳಗೆ ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದುದನ್ನು ಆಯ್ದು ಉತ್ತರಿಸಿ :

136. ಈ ಓದುವಿಕೆ ಪರೀಕ್ಷೆಗೆ ಹೇಗೆ ಅಂಕಗಳನ್ನು ಕೊಡುತ್ತೀರಿ ?
ಪ್ರಶ್ನೆ : ಶ್ರವಣಬೆಳಗೊಳ ಎಲ್ಲಿದೆ ?
ಉತ್ತರ (1) : ಕರ್ನಾಟಕದಲ್ಲಿದೆ
ಉತ್ತರ (2) : ಶ್ರವಣಬೆಳಗೊಳ ಕರ್ನಾಟಕ ದಲ್ಲಿದೆ
(1) ಉತ್ತರ (2) ಕ್ಕೆ 2 ಅಂಕ, ಉತ್ತರ (1) ಕ್ಕೆ 0 ಅಂಕ
(2) ಉತ್ತರ (1) ಕ್ಕೆ 1 ಅಂಕ, ಉತ್ತರ (2) ಕ್ಕೆ 2 ಅಂಕ
(3) ಉತ್ತರ (1) ಕ್ಕೆ 2 ಅಂಕ, ಉತ್ತರ (2) ಕ್ಕೆ 2 ಅಂಕ
(4) ಉತ್ತರ (2)ಕ್ಕೆ ½ ಅಂಕ, ಉತ್ತರ(1) ಕ್ಕೆ 1 ಅಂಕ

137. ವಿಶದಾತ್ಮಕ ಓದುವಿಕೆ ಎಂದರೆ
(1) ಕಮ್ಮಿ ಪರಿಚಯವಿರುವ ಪದಗಳ ಅರ್ಥವನ್ನು ಊಹಿಸುವುದು
(2) ವಿಷಯದ ಸಾಮಾನ್ಯ ಅರ್ಥೈಸುವಿಕೆ ಮತ್ತು ಆಸಕ್ತಿಗೋಸ್ಕರ ಓದುವುದು
(3) ಒಟ್ಟಾರೆ ಪಠ್ಯದ ತಾತ್ಪರ್ಯವನ್ನು ಅರ್ಥಮಾಡಿಕೊಳ್ಳುವುದು
(4) ಪಠ್ಯದ ಬಗ್ಗೆ ಭವಿಷ್ಯ ಕಥನ ಮಾಡುವುದು

138. ಶ್ರವಣ ಕೌಶಲ್ಯವನ್ನು ಪರೀಕ್ಷಿಸಲು ಶಿಕ್ಷಕ ಚಟುವಟಿಕೆಯನ್ನು ಸಿದ್ಧಪಡಿಸಿದ್ದಾನೆ. ಮೌಲ್ಯಮಾಪನ ಯಾವುದರ ಮೇಲೆ ಆಧಾರಿತವಾಗಿರುತ್ತದೆ ?
(1) ಚಿತ್ರವೊಂದನ್ನು ವಿದ್ಯಾರ್ಥಿಗಳು ಅರ್ಥೈಸುವುದರ ಮೇಲೆ
(2) ಒಂದು ಚಿಕ್ಕ ಸಿನಿಮಾ ನೋಡಿ ವಿಶ್ಲೇಷಿಸುವುದರ ಮೇಲೆ
(3) ಧ್ವನಿ ಮುದ್ರಣವನ್ನು ಆಧರಿಸಿ ಒಂದು ಟ್ಯಾಬುಲೇಷನ್ ಮುಗಿಸಿರುವುದರ ಮೇಲೆ
(4) ಒಂದು ಪದ್ಯವನ್ನು ಗಟ್ಟಿಯಾಗಿ ಓದುವುದರ ಮೂಲಕ

139. ಎನ್‌ಕ್ವೈರಿ ಬೇಸ್ಡ್ ಲರ್ನಿಂಗ್ (ಇಬಿಎಲ್)ನಲ್ಲಿ
(1) ಶಿಕ್ಷಕ ಚಟುವಟಿಕೆಯೊಂದನ್ನು ನೀಡಿ ಕಲಿಕೆಗೆ ಪೂರಕ ಅಂಶಗಳನ್ನು ಒದಗಿಸುತ್ತಾನೆ.
(2) ವಿದ್ಯಾರ್ಥಿಗಳು ತಮ್ಮದೇ ಆದ ಶೋಧನೆಯಲ್ಲಿ ತೊಡಗಿಕೊಳ್ಳುತ್ತಾರೆ.
(3) ಮೇಲಿನ (1) ಮತ್ತು (2) ಸಕ್ರಿಯ-ವಾಗಿರುತ್ತದೆ
(4) ಎರಡನೆಯ ಉತ್ತರ ಮಾತ್ರ

140. ಕೆಳಗಿನ ಹೇಳಿಕೆಯನ್ನು ಓದಿ.
ಅವನು ಮಾತನಾಡಿದರೆ ಸಿಂಹ ಗರ್ಜಿಸಿದಂತಾಗುತ್ತದೆ : ಇದು ಈ ಕೆಳಗಿನವುಗಳಲ್ಲಿ ಯಾವುದು ?
(1) ಉತ್ಪ್ರೇಕ್ಷೆ (2) ಶ್ಲೇಷೆ
(3) ಸೌಮ್ಯೋಕ್ತಿ (4) ಸಾಂಕೇತಿಕತೆ

141. 'ಮಗು ಇಸ್ಸೀ ಮಾಡಿಕೊಂಡಿದೆ' ಈ ಹೇಳಿಕೆ
(1) ಮಗುವಿನ ತುಂಟತನಕ್ಕೆ ಸಂಬಂಧಿಸಿದ್ದು
(2) ಮಗುವಿನ ಮುಗ್ಧತೆಗೆ ಸಾಕ್ಷಿ
(3) ಮಗು ಕಕಸ್ಸು ಮಾಡಿದೆ ಎನ್ನುವುದರ ಸೌಮ್ಯೋಕ್ತಿ
(4) ಮಗುವಿನ ಅಳುವನ್ನು ಸೂಚಿಸುತ್ತದೆ

142. ಯಾವುದೇ ಸಿದ್ಧಪಠ್ಯಗಳನ್ನು ಬಳಸದೆ ವಿಶದ ಚರ್ಚೆಯಲ್ಲಿ ಓದಿನ ಆರಂಭಕ್ಕೆ ಪೂರ್ವದಲ್ಲಿ ತೊಡಗಿಕೊಳ್ಳುವ ವಿಧಾನ ಕೆಳಗಿನ ಯಾವ ಪದ್ಧತಿಯಲ್ಲಿ ಹೆಚ್ಚು ?
(1) ಉತ್ಪಾದಕ-ಪರಿವರ್ತನಾತ್ಮಕ ಸಿದ್ಧಾಂತ
(2) ರಶಿಯಸ್ ವಿಧಾನ
(3) ವ್ಯಾಕರಣಾನುವಾದ ವಿಧಾನ
(4) ವಾಕ್-ಶ್ರವಣ ವಿಧಾನ

143. ವಿರಾಮ ಚಿನ್ಹೆಗಳು : ಸರಿಯಾದ ಆಯ್ಕೆಯನ್ನು ಆರಿಸಿ.
ರಾಮ ಲಕ್ಷ್ಮಣ ಮತ್ತು ಸೀತೆಯರು ಸುಗ್ರೀವ ಆಂಜನೇಯ ಮತ್ತು ಜಾಂಭವಂತನೊಂದಿಗೆ ಕಾಡಿನಲ್ಲೆಲ್ಲಾ ಸುತ್ತಾಡಿದರು.
ಈ ವಾಕ್ಯದಲ್ಲಿ ವಿರಾಮ ಚಿನ್ಹೆಗಳು ಬಿಟ್ಟು ಹೋಗಿವೆ. ವಿರಾಮ ಚಿನ್ಹೆ ಹಾಕಿದ ಸರಿಯಾದ ವಾಕ್ಯವನ್ನು ಗುರುತಿಸಿ.
(1) ರಾಮ, ಲಕ್ಷ್ಮಣ ಮತ್ತು ಸೀತೆಯರು ಸುಗ್ರೀವ ಆಂಜನೇಯ ಮತ್ತು ಜಾಂಭವಂತನೊಂದಿಗೆ ಕಾಡಿನಲ್ಲೆಲ್ಲಾ ಸುತ್ತಾಡಿದರು.
(2) ರಾಮ, ಲಕ್ಷ್ಮಣ ಮತ್ತು ಸೀತೆಯರು ಸುಗ್ರೀವ, ಆಂಜನೇಯ ಮತ್ತು ಜಾಂಭವಂತನೊಂದಿಗೆ ಕಾಡಿನಲ್ಲೆಲ್ಲಾ ಸುತ್ತಾಡಿದರು.
(3) ರಾಮ ಲಕ್ಷ್ಮಣ ಮತ್ತು ಸೀತೆಯರು ಸುಗ್ರೀವ, ಆಂಜನೇಯ ಮತ್ತು ಜಾಂಭವಂತನೊಂದಿಗೆ ಕಾಡಿನಲ್ಲೆಲ್ಲಾ ಸುತ್ತಾಡಿದರು.
(4) ಯಾವುದೂ ಅಲ್ಲ

144. ಸಾಮಾನ್ಯ ಮತ್ತು ವಿಶೇಷ ಶಿಕ್ಷಣವನ್ನು ಪ್ರತ್ಯೇಕಿಸದ ಶಾಲೆಗಳನ್ನು ಹೀಗೆ ಕರೆಯುತ್ತಾರೆ.
(1) ವಿಶೇಷಿತ (2) ಎಕ್ಸ್‌ಕ್ಲೂಸಿವ್
(3) ಪ್ರಮಾಣಬದ್ಧ (4) ಇನ್‌ಕ್ಲೂಸಿವ್

145. ಪ್ರತೀ ತರಗತಿಯ ಕೊನೆಯಲ್ಲಿ ಶಿಕ್ಷಕ ತನ್ನ ವಿದ್ಯಾರ್ಥಿಗಳ ಶ್ರವಣ, ಓದುವಿಕೆ, ಬರೆಯುವಿಕೆ, ಮಾತಾಡುವಿಕೆಯನ್ನು ಪರೀಕ್ಷಿಸುತ್ತಾನೆ. ಈ ಬಗೆಯ ಮೌಲ್ಯ ಮಾಪನದ ಉದ್ದೇಶ :

(1) ಭಾಷಾ ಕಲಿಕೆಯ ಸಾಮರ್ಥ್ಯವನ್ನು ಅಳೆಯುವುದು

(2) ಶಿಕ್ಷಕರಿಗೆ ಶೈಕ್ಷಣಿಕ ಚಟುವಟಿಕೆಗಳನ್ನು ತಯಾರಿಸಲು ಸಹಾಯ ಮಾಡುವುದು

(3) ವಿದ್ಯಾರ್ಥಿಗಳ ಒಟ್ಟಾರೆ ಕೌಶಲ್ಯತೆಯನ್ನು ಅಳೆಯುವುದು

(4) ಭಾಷಾ ತರಗತಿಗಳನ್ನು ಕುರಿತಂತೆ ವಿದ್ಯಾರ್ಥಿಗಳ ಮನೋಭಾವವನ್ನು ಗುರುತಿಸುವುದು

146. 'ಇ-ಲರ್ನಿಂಗ್' ಎಂದರೆ

(1) ದೂರ ಶಿಕ್ಷಣ

(2) ಹಾರ್ಡ್‌ವೇರ್ ಅನ್ನು ಸಕ್ರಿಯವಾಗಿ ಬಳಸಿಕೊಳ್ಳುವುದು

(3) ತಾಂತ್ರಿಕತೆಯೊಂದಿಗೆ ಸಂಯುಕ್ತ ಕಲಿಕಾ ಪದ್ಧತಿ

(4) ಸಾಕ್ಷ್ಯ ಚಿತ್ರಗಳು

147. ಒಬ್ಬ ಶಿಕ್ಷಕ ಅಧಿಕೃತ ಕನ್ನಡ ಪಠ್ಯವನ್ನು ಅಳವಡಿಸಿಕೊಳ್ಳಬೇಕೆಂದರೆ, ಈ ಕೆಳಗಿನವುಗಳಲ್ಲಿ ಯಾವುದು ಉಚಿತವಲ್ಲ ?

(1) ಕನ್ನಡ ದಿನಪತ್ರಿಕೆ

(2) ಕನ್ನಡಕ್ಕೆ ಅನುವಾದವಾಗಿರುವ ಇಂಗ್ಲೀಷ್ ಲೇಖನ

(3) ಕರ್ನಾಟಕದಲ್ಲಿನ ಉದ್ಯೋಗಕ್ಕಾಗಿ ಇರುವ ಕನ್ನಡ ಅರ್ಜಿ

(4) ಮೈಸೂರಿನ ಬೀದಿಗಳ ಭಾವಚಿತ್ರಗಳು

148. ಮೌಖಿಕವಲ್ಲದ ಸಂವಹನವು ಈ ಮೂಲಕ ನಡೆಯುತ್ತದೆ.

(1) ಆಡು ನುಡಿಗಳ ಮೂಲಕ

(2) ಅಂಗಚಲನೆಗಳ ಮೂಲಕ

(3) ಸಂಖ್ಯೆಗಳ ಮೂಲಕ

(4) ಮುದ್ರಿತ ಪದಗಳ ಮೂಲಕ

149. ಸಹಯೋಗಿತ ಸಮೂಹ ಕಲಿಕೆಯು (ಕೋ ಆಪರೇಟಿವ್ ಗ್ರೂಪ್ ಲರ್ನಿಂಗ್) ಕೆಳಗೆ ಕೊಟ್ಟಿರುವ ಅಂಶಗಳಲ್ಲಿ ಒಂದನ್ನು ಬಿಟ್ಟು ಉಳಿದೆಲ್ಲವನ್ನು ಒಳಗೊಳ್ಳುತ್ತದೆ. ಬಿಡಬೇಕಾದದ್ದು ಯಾವುದು ?

(1) ವಿದ್ಯಾರ್ಥಿಗಳ ಅಭ್ಯಾಸಕ್ಕೆ ಹೆಚ್ಚು ಸಮಯ

(2) ಶಿಸ್ತುಬದ್ಧ ತರಗತಿ

(3) ಶಿಕ್ಷಕ ಕೇಂದ್ರಿತ ಬೋಧನೆಗೆ ಒಂದು ಪರ್ಯಾಯ

(4) ಹಿಂಜರಿಯುವ ವಿದ್ಯಾರ್ಥಿಗಳನ್ನು ಭಾಗವಹಿಸುವಂತೆ ಪ್ರಚೋದಿಸಲು ಸಮಸ್ಕಂದರ ತೊಡಗಿಕೊಳ್ಳುವಿಕೆ

150. ಓದಿನ ಚಟುವಟಿಕೆಯಲ್ಲಿ ಇನ್ಫರೆನ್ಸ್ ಮಾಡುವುದು ಈ ಕೆಳಗಿನ ಯಾವುದನ್ನು ಒಳಗೊಳ್ಳುತ್ತದೆ ?

(1) ಹೇಳಿದ್ದರ ಮೂಲಕ ಹೇಳದಿರುವುದನ್ನು ಗುರುತಿಸುವುದು

(2) ಕೊಟ್ಟಿರುವ ಪಠ್ಯದಲ್ಲಿ ಒಂದೊಂದು ಅಂಶಗಳಿಗೆ ಕೊಂಡಿ ಕಲ್ಪಿಸುವುದು

(3) ಓದುತ್ತಿರುವ ಪಠ್ಯದ ಬಗ್ಗೆ ಊಹಿಸುವುದು

(4) ತಿಳಿಯದ ಪದಗಳ ಅರ್ಥ ಹುಡುಕುವುದು

## SPACE FOR ROUGH WORK

# SPACE FOR ROUGH WORK

**ಕೆಳಗೆ ಕಾಣಿಸಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ :**

1. ಪ್ರತಿಯೊಂದು ಪ್ರಶ್ನೆಗೆ 4 ವಿಕಲ್ಪ ಉತ್ತರಗಳನ್ನು ಕೊಡಲಾಗಿದೆ. (OMR) ಉತ್ತರ ಪತ್ರಿಕೆಯ ಪುಟ-2 ರಲ್ಲಿ ಕೇವಲ ಒಂದು ವೃತ್ತವನ್ನು ಮಾತ್ರ ನೀಲಿ/ಕಪ್ಪು ಬಾಲ್ ಪಾಯಿಂಟ್ ಪೆನ್ ನಿಂದ ತುಂಬಿಸಬೇಕು. ಒಂದು ಬಾರಿ ಉತ್ತರ ನಮೂದಿಸಿದ ಮೇಲೆ ಬದಲಾಯಿಸಲು ಸಾಧ್ಯವಿಲ್ಲ.
2. ಉತ್ತರ ಪತ್ರಿಕೆ ಮಡಚಬಾರದು, ಈ ಬಗ್ಗೆ ಪರೀಕ್ಷಾರ್ಥಿ ಎಚ್ಚರಿಕೆ ವಹಿಸಬೇಕು, ಉತ್ತರ ಪತ್ರಿಕೆಯ ಮೇಲೆ ಬೇರೆ ಯಾವುದೇ ಗುರುತು ಬೀಳಬಾರದು. ಪರೀಕ್ಷಾರ್ಥಿ ತನ್ನ ಅನುಕ್ರಮಣಿಕೆ ಸಂಖ್ಯೆಯನ್ನು ಉತ್ತರ ಪತ್ರಿಕೆಯಲ್ಲಿ ನಿರ್ಧಾರಿತವಾದ ಸ್ಥಳವಲ್ಲದೇ ಬೇರೆ ಎಲ್ಲಿಯೂ ಬರೆಯಬಾರದು.
3. ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಗಳನ್ನು ಎಚ್ಚರಿಕೆಯಿಂದ ಉಪಯೋಗಿಸಿ, ಯಾಕೆಂದರೆ ಯಾವುದೇ ಪರಿಸ್ಥಿತಿ ಯಲ್ಲಿ (ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಕೋಡ್ ಅಥವಾ ಸಂಖ್ಯೆ ಬೇರೆ ಬೇರೆಯಾಗಿರುವ ಸ್ಥಿತಿಯನ್ನು ಹೊರತು ಪಡಿಸಿ) ಬೇರೆ ಪ್ರಶ್ನೆ ಪತ್ರಿಕೆ ಕೊಡಲಾಗುವುದಿಲ್ಲ.
4. ಪ್ರಶ್ನೆ ಪತ್ರಿಕೆ/ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಸಂಕೇತ ಮತ್ತು ಸಂಖ್ಯೆಯನ್ನು ಪರೀಕ್ಷಾರ್ಥಿಯು ಹಾಜರಿ ಪತ್ರದಲ್ಲಿ ಸರಿಯಾಗಿ ಬರೆಯಬೇಕು (Attendance Sheet).
5. ಪರೀಕ್ಷಾರ್ಥಿಯು, ಪರೀಕ್ಷಾ ಹಾಲ್/ಕೋಣೆಯಲ್ಲಿ ಪ್ರವೇಶ ಕಾರ್ಡ್ ಅಲ್ಲದೇ ಬೇರೆ ಯಾವ ರೀತಿಯ ಪಠ್ಯ ಸಾಮಗ್ರಿ, ಮುದ್ರಿತ ಅಥವಾ ಕೈಯಲ್ಲಿ ಬರೆದ, ಕಾಗದದ, ಚೀಟಿಗಳು, ಪೇಜರ್, ಮೊಬೈಲ್ ಫೋನು, ಇಲೆಕ್ಟ್ರಾನಿಕ್ ಉಪಕರಣಗಳು ಅಥವಾ ಬೇರೆ ಪ್ರಕಾರದ ಸಾಮಗ್ರಿಗಳನ್ನು ತರುವುದು ಅಥವಾ ಉಪಯೋಗ ಮಾಡಲು ಅನುಮತಿ ಇಲ್ಲ.
6. ಕೇಳಿದಾಗ, ಪ್ರತಿಯೊಬ್ಬ ಪರೀಕ್ಷಾರ್ಥಿ ತನ್ನ ಪ್ರವೇಶ ಕಾರ್ಡ್ ನ್ನು ನಿರೀಕ್ಷಕರಿಗೆ ತೋರಿಸಬೇಕು.
7. ಅಧೀಕ್ಷಕರು ಅಥವಾ ನಿರೀಕ್ಷಕರ ವಿಶೇಷ ಅನುಮತಿ ಇಲ್ಲದೇ ಯಾರೇ ಪರೀಕ್ಷಾರ್ಥಿ ತನ್ನ ಸ್ಥಾನವನ್ನು ಬಿಡಬಾರದು.
8. ಕಾರ್ಯನಿರತ ನಿರೀಕ್ಷಕರಿಗೆ ತನ್ನ ಉತ್ತರ ಪತ್ರಿಕೆ ಕೊಡದೇ ಹಾಗೂ ಹಾಜರೀ ಪತ್ರದಲ್ಲಿ ಎರಡು ಬಾರಿ ಸಹಿ ಹಾಕದೇ ಯಾವ ಪರೀಕ್ಷಾರ್ಥಿಯೂ ಪರೀಕ್ಷಾ ಹಾಲ್ ನಿಂದ ಹೊರಗೆ ಹೋಗಬಾರದು. ಹಾಗೊಂದು ವೇಳೆ ಪರೀಕ್ಷಾರ್ಥಿ ಎರಡನೇ ಬಾರಿ ಹಾಜರಿ ಪತ್ರದಲ್ಲಿ ಸಹಿ ಮಾಡದೇ ಇದ್ದರೆ, ಆ ವ್ಯಕ್ತಿ, ಉತ್ತರ ಪತ್ರಿಕೆ ಹಿಂದೆ ಕೊಟ್ಟಿಲ್ಲ ಮತ್ತು ಇದು ಅನುಚಿತ ಸಾಧನ ಬಳಕೆಯ ಪ್ರಕರಣ ಎಂದು ತಿಳಿದು ಸೂಕ್ತ ಕ್ರಮ ಕೈಗೊಳ್ಳಲಾಗುವುದು.
9. ಇಲೆಕ್ಟ್ರಾನಿಕ್/ಹಸ್ತ ಚಾಲನೆಯ ಗಣಕಯಂತ್ರ (calculator) ಉಪಯೋಗ ನಿಷೇಧಿಸಲಾಗಿದೆ.
10. ಪರೀಕ್ಷಾ ಹಾಲ್ ನಲ್ಲಿ, ಪರೀಕ್ಷಾರ್ಥಿ ಬೋರ್ಡ್ ನ ಎಲ್ಲಾ ನೀತಿ ನಿಯಮಾವಳಿಗಳ ಪಾಲನೆಗಾಗಿ ಬದ್ಧನಾಗಿರುತ್ತಾರೆ. ಅನುಚಿತ ಸಾಧನಗಳ ಎಲ್ಲಾ ಪ್ರಕರಣಗಳನ್ನು ಬೋರ್ಡ್ ನ ನೀತಿ-ನಿಯಮಾವಳಿಗಳ ಅನುಸಾರ ನಿರ್ಧರಿಸಲಾಗುವುದು.
11. ಎಂತಹುದೇ ಪರಿಸ್ಥಿತಿಯಲ್ಲಿ ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಯಾವುದೇ ಭಾಗವನ್ನು ಬೇರೆ ಮಾಡಬಾರದು.
12. ಪರೀಕ್ಷೆ ಮುಗಿದ ನಂತರ, ಪರೀಕ್ಷಾರ್ಥಿ, ಪರೀಕ್ಷಾ ಹಾಲ್/ಕೋಣೆಯಿಂದ ಹೊರಗೆ ಬರುವ ಮೊದಲು, ನಿರೀಕ್ಷಕರಿಗೆ ಉತ್ತರ ಪತ್ರಿಕೆಯನ್ನು ತಪ್ಪದೇ ಒಪ್ಪಿಸಬೇಕು. ಪರೀಕ್ಷಾರ್ಥಿ ಪ್ರಶ್ನೆ ಪತ್ರಿಕೆಯನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.

**READ CAREFULLY THE FOLLOWING INSTRUCTIONS :**

1. Out of the four alternatives for each question, only one circle for the correct answer is to be darkened completely with Blue/Black Ball Point Pen on Side-2 of the OMR Answer Sheet. The answer once marked is not liable to be changed.
2. The candidates should ensure that the Answer Sheet is not folded. Do not make any stray marks on the Answer Sheet. Do not write your Roll No. anywhere else except in the specified space in the Answer Sheet.
3. Handle the Test Booklet and Answer Sheet with care, as under no circumstances (except for discrepancy in Test Booklet Code or Number and Answer Sheet Code or Number), another set will be provided.
4. The candidates will write the correct Test Booklet Code and Number as given in the Test Booklet / Answer Sheet in the Attendance Sheet.
5. Candidates are not allowed to carry any textual material, printed or written, bits of papers, pager, mobile phone, electronic device or any other material except the Admit Card inside the examination hall/room.
6. Each candidate must show on demand his / her Admission Card to the Invigilator.
7. No candidate, without special permission of the Superintendent or Invigilator, should leave his / her seat.
8. The candidates should not leave the Examination Hall without handing over their Answer Sheet to the Invigilator on duty and sign the Attendance Sheet twice. Cases where a candidate has not signed the Attendance Sheet a second time will be deemed not to have handed over the Answer Sheet and dealt with as an unfair means case.
9. Use of Electronic / Manual Calculator is prohibited.
10. The candidates are governed by all Rules and Regulations of the Board with regard to their conduct in the Examination Hall. All cases of unfair means will be dealt with as per Rules and Regulations of the Board.
11. No part of the Test Booklet and Answer Sheet shall be detached under any circumstances.
12. **On completion of the test, the candidate must hand over the Answer Sheet to the Invigilator in the Room / Hall. *The candidates are allowed to take away this Test Booklet with them.***

**निम्नलिखित निर्देश ध्यान से पढ़ें :**

1. प्रत्येक प्रश्न के लिए दिए गए चार विकल्पों में से सही उत्तर के लिए OMR उत्तर पत्र के पृष्ठ-2 पर केवल एक वृत्त को ही पूरी तरह नीले/काले बॉल पॉइन्ट पेन से भरें । एक बार उत्तर अंकित करने के बाद उसे बदला नहीं जा सकता है ।
2. परीक्षार्थी सुनिश्चित करें कि इस उत्तर पत्र को मोड़ा न जाए एवं उस पर कोई अन्य निशान न लगाएँ । परीक्षार्थी अपना अनुक्रमांक उत्तर पत्र में निर्धारित स्थान के अतिरिक्त अन्यत्र न लिखें ।
3. परीक्षा पुस्तिका एवं उत्तर पत्र का ध्यानपूर्वक प्रयोग करें, क्योंकि किसी भी परिस्थिति में (केवल परीक्षा पुस्तिका एवं उत्तर पत्र के संकेत या संख्या में भिन्नता की स्थिति को छोड़कर) दूसरी परीक्षा पुस्तिका उपलब्ध नहीं करायी जाएगी ।
4. परीक्षा पुस्तिका / उत्तर पत्र में दिए गए परीक्षा पुस्तिका संकेत व संख्या को परीक्षार्थी सही तरीके से हाज़िरी-पत्र में लिखें ।
5. परीक्षार्थी द्वारा परीक्षा हॉल/कक्ष में प्रवेश कार्ड के सिवाय किसी प्रकार की पाठ्य सामग्री, मुद्रित या हस्तलिखित, कागज़ की पर्चियाँ, पेजर, मोबाइल फोन, इलेक्ट्रॉनिक उपकरण या किसी अन्य प्रकार की सामग्री को ले जाने या उपयोग करने की अनुमति नहीं है ।
6. पूछे जाने पर प्रत्येक परीक्षार्थी, निरीक्षक को अपना प्रवेश-कार्ड दिखाएँ ।
7. अधीक्षक या निरीक्षक की विशेष अनुमति के बिना कोई परीक्षार्थी अपना स्थान न छोड़ें ।
8. कार्यरत निरीक्षक को अपना उत्तर पत्र दिए बिना एवं हाज़िरी-पत्र पर दुबारा हस्ताक्षर किए बिना परीक्षार्थी परीक्षा हॉल नहीं छोड़ेंगे । यदि किसी परीक्षार्थी ने दूसरी बार हाज़िरी-पत्र पर हस्ताक्षर नहीं किए तो यह माना जाएगा कि उसने उत्तर पत्र नहीं लौटाया है और यह अनुचित साधन का मामला माना जाएगा ।
9. इलेक्ट्रॉनिक / हस्तचालित परिकलक का उपयोग वर्जित है ।
10. परीक्षा-हॉल में आचरण के लिए परीक्षार्थी बोर्ड के सभी नियमों एवं विनियमों द्वारा नियमित हैं । अनुचित साधनों के सभी मामलों का फैसला बोर्ड के नियमों एवं विनियमों के अनुसार होगा ।
11. किसी हालत में परीक्षा पुस्तिका और उत्तर पत्र का कोई भाग अलग न करें ।
12. **परीक्षा सम्पन्न होने पर, परीक्षार्थी कक्ष / हॉल छोड़ने से पूर्व उत्तर पत्र कक्ष-निरीक्षक को अवश्य सौंप दें । *परीक्षार्थी अपने साथ इस परीक्षा पुस्तिका को ले जा सकते हैं ।***

SEAL